ಅಪರಂಜಿ

ಆಗಸ್ಟ್ 2004

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಕೃಷ್ಣ ಸುಬ್ಬರಾವ್

ಎಲ್.ಎಸ್. ಶೇಷಗಿರಿ ರಾವ್

ಎ.ಎನ್. ಮೂರ್ತಿರಾಯರು

ಕೆ.ವಿ. ಐಯ್ಯರ್

ಎಚ್. ಗೋಪಾಲಕೃಷ್ಣ

ಇಂದು ರಮೇಶ್

ಕುಮುದಾ ಪುರುಷೋತ್ತಮ್

ಕೆ. ಚಂದ್ರಮೌಳಿ

ಮಣಿ

ಬಿಡಿ ಪ್ರತಿ: ರೂ. 10.00



ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ

ಚಂದಾ ವಿವರ:
ಬಿಡಿ ಪ್ರತಿ: ರೂ. 10.00
ವಾರ್ಷಿಕ ಚಂದಾ ರೂ. 100
ಹತ್ತು ವರ್ಷದ ಚಂದಾ ರೂ. 750

Ph: 23345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 21 ಆಗಸ್ಟ್ - 2004 ಸಂಚಿಕೆ - 11

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27



○ ಪ್ರಕಾಶ್

''ಸಮರಕ್ಕೆ ಸಜ್ಜಾಗಿ ನಿಂತ ಪ್ರತಿಪಕ್ಷ''

''ಸುಗಮ ಕಲಾಪಕ್ಕೆ ಪ್ರಧಾನಿ ಮನವಿ''

ದಿನಪತ್ರಿಕೆಯಲ್ಲಿ ಒಂದರ ಕೆಳಗೆ ಒಂದು ಶೀರ್ಷಿಕೆ!!

★★★

ಕಳಂಕಿತ ಸಚಿವರು ಹೊರಗಿನಿಂದ ಕಾರ್ಯ ನಿರ್ವಹಿಸಬಹುದು

- ಹೇಳಿಕೆ

ಆಗ ಒಳ ಜಗಳಗಳಿರುವುದಿಲ್ಲ!

★★★

ಪಾರ್ಲಿಮೆಂಟ್ ಸೆಂಟ್ರಲ್ ಹಾಲ್ ಧೂಮಮುಕ್ತ

- ಸುದ್ದಿ

ಕಿಡಿಗಳಂತೂ ಇದ್ದೇ ಇರುತ್ತವೆ!!

★★★

ಹಣಕ್ಕಾಗಿ ಹಾತೊರೆಯುವುದು ಸಲ್ಲ

- ಹೇಳಿಕೆ

ನಮ್ಮ ಅನುಭವವೂ ಇದೇ ಆಗಿದೆ!!

★★★

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ

- ನ್ಯಾಯಮೂರ್ತಿ

ಪಾಪ, ಇದುವರೆಗೆ ಶಾಂತವಾಗಿದ್ದರು!

★★★

ಸಂಗ್ರಾಮ್ ಆರೋಪ ತನಿಖೆ

- ಸುದ್ದಿ


ವೀರಪ್ಪನ್ ಮೀಸೆಯ ಹಿಂದೆಯೇ ನಕ್ಕನಂತೆ!

★★★

''ವಿಮಾನ ನಿಲ್ದಾಣ ರಸ್ತೆ, ಮೇಲೇಳದ ಮೇಲು ಸೇತುವೆ''

ಶೀರ್ಷಿಕೆ ಅಂದರೆ ಹೀಗಿರಬೇಕು!!

★★★



ನನ್ನ ನಲ್ಲೆ

ಗೆಳೆಯ ವೀಸುವಿನ ಲೇಖನ ಆಗೊಮ್ಮೆ ಈಗೊಮ್ಮೆ ಅಪರಂಜಿಯಲ್ಲಿ ಅಚ್ಚಾಗಿ, ಸಂಚಿಕೆ ಮನೆಗೆ ಬಂದು ತಲುಪಿದಾಗಲೆಲ್ಲಾ ನನ್ನ ಎದೆ ಢವಗುಟ್ಟುಕ್ಕೆ ಶುರು. ಇದಕ್ಕೆ ಕಾರಣ ಮಂಗಳೆಯ ಹರಿತವಾದ ನಾಲಿಗೆ. ''ನೋಡಿ ಎಷ್ಟು ಚೆನ್ನಾಗಿ ಬರೆದಿದ್ದಾರೆ. ನೀವೂ ಇದೀರ. ನೆಟ್ಟಗೆ ಎರಡು ಸಾಲು ಬರೆಯುಕ್ಕೆ ಬರುಲ್ಲ'' ಎಂದು ನನ್ನನ್ನು ಹೀನಾಮಾನವಾಗಿ ಅಂದು ನನ್ನಲ್ಲಿದ್ದ ಅಲ್ಪಸ್ವಲ್ಪ ಆತ್ಮ ವಿಶ್ವಾಸವನ್ನೂ ಕರಗಿಸಿಬಿಡುತ್ತಿದ್ದಳು. ಎಲ್ಲಾದರೂ ಭಾಷಣಕ್ಕೆ ನನ್ನನ್ನು ಕರೆದಾಗ ಮೊದಮೊದಲು ಅವಳನ್ನೂ ಕರೆದೊಯ್ಯುತ್ತಿದ್ದೆ. ಆಕೆಯ high acceptance standard ನ ಪರಿಚಯವಾದಂತೆ ಯಾವುದಾದರೊಂದು ಸಬೂಬು ಹೇಳಿ ನಾನು ಒಬ್ಬನೇ ಸಮಾರಂಭಗಳಿಗೆ ಹೋಗುವುದನ್ನು ಅಭ್ಯಾಸ ಮಾಡಿಕೊಳ್ಳಬೇಕಾಯಿತು. ಮೂವತ್ತೇಳು ವರ್ಷಗಳ ಹಿಂದೆ ನಾವಿಬ್ಬರೂ ಅರಿಯದ ಹಸುಳೆಗಳಂತೆ ಬಾಳದೋಣಿಯಲ್ಲಿ ಕುಳಿತಂದಿನಿಂದ ಈ ರೀತಿ ಅನೇಕ ಬಾರಿ ನನ್ನ ತೇಜೋವಧೆ ಆಗಿದ್ದರೂ ಎಂದಿಗೂ ಆಕೆ ದೋಣಿಯ ಚುಕ್ಕಾಣಿ ಹಿಡಿಯುವ ಆಸಕ್ತಿ ತೋರಿಸಿರಲಿಲ್ಲ. ಹಾಗಾಗಿ ಆಕೆಯ ಆರ್ಭಟವೆಲ್ಲಾ light banter ರೂಪ ತಾಳಿದ್ದು, ಅದಿಲ್ಲದಿದ್ದರೆ ಏನನ್ನೋ ಕಳೆದುಕೊಂಡಂತೆ ಭಾಸವಾಗುತ್ತಿತ್ತು. ಸಪ್ತಪದಿಯ ದಿನಗಳಿಂದ ಮೊದಲುಗೊಂಡು ನನ್ನ ಹಿಂದೆಯೇ ನಡೆದುಬಂದು ನಾನು ತೋರಿದ ಹಾದಿಯಲ್ಲಿ ನಡೆದು ಈಚೆಗೆ ತನ್ನ ಯಾತ್ರೆಯನ್ನು ಮುಗಿಸಿಬಿಟ್ಟಳು ಮಂಗಳೆ.


ಇಷ್ಟೊಂದು ಮುಗ್ಧತೆಯ ನಡುವೆಯೂ ಸಾವಿಗೆ ಅಂಜಿದವಳಲ್ಲ ಆಕೆ. ಕಳೆದ ಆರು ತಿಂಗಳುಗಳ ಕಾಲ ಆಕೆ ಸತತವಾಗಿ ಬೇನೆಯಿಂದ ನರಳುತ್ತಿದ್ದಾಗ ''ಬೇಗ ಭಗವಂತನ ಪಾದ ಸೇರಿಕೊಳ್ಳುವಂತೆ ಪ್ರಾರ್ಥನೆ ಮಾಡು'' ಎಂದು ನನಗೆ ದುಂಬಾಲು ಬೀಳುತ್ತಿದ್ದಳು. ''ನೀನೇ ಮಾಡೇ, ನನಗೇನು ಹೇಳ್ತೀಯಾ?'' ಅಂತ ನಾನು ಕೇಳಿದರೆ, ''ನನ್ನ ಮಾತು ಯಾರು ಕೇಳ್ತಾರೆ? ನಿನ್ನ ಮಾತು ಅಂದ್ರೆ ದೇವರಿಗೂ ಸ್ವಲ್ಪ ಗೌರವ'' ಎಂಬ ಉತ್ತರ ಬರುತ್ತಿತ್ತು. ಕೊನೆಯ ದಿನಗಳಲ್ಲಿ ಐವಿ ಸೂಜಿಗಳ ಪ್ರಯುಕ್ತ ಎರಡು ಕೈಗಳನ್ನೂ ಮಡಿಚಲು ಸಾಧ್ಯವಾಗದಂತಾದಾಗ ಬೆಳಗಾಗೆದ್ದು ನಾನೇ ಅವಳ ತಲೆ ಬಾಚಿ ಕಪ್ಪು ಬಣ್ಣದ ಎಲಾಸ್ಟಿಕ್ ಬಳೆಯನ್ನು ಕೂದಲಿಗೆ ಬಿಗಿಯಾಗಿ ತೊಡಿಸಿ, ಒಂದು ಪೋನಿ ಟೇಲ್ ರೂಪಿಸಿ ''ನೋಡೇ ಹ್ಯಾಗೆ ಬಾಚಿದೀನಿ'' ಅಂತ ಜಂಭ ಕೊಚ್ಚಿಕೊಂಡಾಗ ಆಕೆಯ ಕಣ್ಣಿನಲ್ಲಿನ ಮೆಚ್ಚುಗೆಯ ನೋಟ ನನ್ನನ್ನು ಎಂದಿಗೂ ಬೆಚ್ಚಗಿಟ್ಟಿರಬಲ್ಲುದು.

ನನ್ನ ಈ ಕತ್ತಲೆಯ ದಿನಗಳಲ್ಲಿ ಅನೇಕ ಬಂಧು ಮಿತ್ರರು ನನ್ನ ನೆರವಿಗೆ ಬಂದು ಸಾಂತ್ವನ ಹೇಳಿ ನನ್ನ ಭಾರವನ್ನು ಹಗುರಗೊಳಿಸಿದ್ದಾರೆ. ''ಆಕೆಯ ನಿಧನಕ್ಕಾಗಿ ಶೋಕಿಸಬೇಡ. ಆಕೆಯ ಸಾರ್ಥಕ ಬಾಳನ್ನು ಹಬ್ಬದಂತೆ ಆಚರಿಸು'' ಎಂದು ಮಿತ್ರ ಬಾಲನ್ ಹೇಳಿದರೆ; ಗೆಳೆಯ ನಾಗೇಂದ್ರ ಟೊರಾಂಟೋದಿಂದ ಒಂದು ಪತ್ರ ಬರೆದಿದ್ದಾನೆ.

"Life is experiencing the realm of change. The scriptures use the word "samsaara", to indicate the flux of change. It influences us and creates worldliness in the experiencer. That influence is mo'ha (confusion), raaga (attachment) and sho'ka (sadness). If one is infleunced, he is called a samsaari, the worldly being. I know that you are a saadhaka, who has learnt from life, unlike a samsaari. You have cultivated vive'ka (discrimination), vairaagya (objectivity) and you are a pursuer of Aatmagnaana (Self-knowledge). You are blessed. You are strong. I know that you have done an excellent job in taking care of Mangala... Cheers."

ಮಿತ್ರ ನಾಗೇಂದ್ರನ ಪತ್ರವನ್ನು ಓದಿದಾಗ, I sincerely hope he knows what he is talking bout ಅಂತ ಅನ್ನಿಸಿತು.

– ಶಿವಕುಮಾರ್



ಶ್ರದ್ಧಾಂಜಲಿ

ಹಾಸ್ಯನಟ ಮಹಮೂದ್

ಪೂರ್ಣ ಪ್ರಮಾಣದ ಹಾಸ್ಯ ಚಿತ್ರವೊಂದನ್ನು ಭಾರತದಲ್ಲಿ ತೆಗೆದ ಕೀರ್ತಿ ಮಹಮೂದ್‌ರಿಗೆ ಸೇರಬೇಕು. ಚಾರ್ಲಿ ಚಾಪ್ಲಿನ್, ಲಾರೆಲ್ ಅಂಡ್ ಹಾರ್ಡಿ, ಜೆರ್ರಿ ಲೂಯಿಸ್ ನಾರ್ಮನ್ ವಿಸ್ಡಮ್ ಅಂತಹವರ ಹಾಸ್ಯ ಚಲನಚಿತ್ರಗಳನ್ನು ನೋಡಿದ್ದ ನನಗೆ ಭಾರತದಲ್ಲಿ ಏಕೆ ಇಂತಹ ಸಂಪೂರ್ಣ ಹಾಸ್ಯ ಚಿತ್ರ ತೆಗಿಬಾರದು ಎಂದು ಆಸೆ ಇತ್ತು. ಆ ವೇಳೆಗೆ ಪಡೋಸನ್ ಚಿತ್ರ ಬಂತು. ಮಹಮೂದ್ ಹಾಸ್ಯನಟರ ಒಂದು ದೊಡ್ಡ ದಂಡನ್ನೇ ಕಲೆ ಹಾಕಿದರು. ಭೋಳೆ ಸ್ವಭಾವದ ಹೀರೋ ಒಬ್ಬ ಅವನ ಎದುರು ಮನೆಯಲ್ಲಿ ಅನುಪಮ ಸುಂದರಿ ಅವರಿಬ್ಬರ ನಡುವೆ ಪ್ರೇಮಾಂಕುರ, ಮಧ್ಯೆ ಪ್ರವೇಶಿಸುವ ನಾಯಕಿಯ ನಾಟ್ಯ ಗುರು. ಇದೊಂದು ಸಾಮಾನ್ಯ ಕಥಾ ಹಂದರ. ಆದರೆ ಅದಕ್ಕೆ ಜೀವಸೆಲೆ ಹಾಸ್ಯವಾಗಿದೆ, ಕಿಶೋರ್‌ಕುಮಾರ್ ಕೆಸ್ಟೊ ಮುಖರ್ಜಿ, ಮುಕ್ರಿ ಮುಂತಾದವರೆಲ್ಲಾ ಸೇರಿ ರಂಜನೀಯ ಸಿನಿಮಾ ಕೊಟ್ಟರು. ಹಾಡುಗಳಂತೂ ಅದ್ಭುತ. ಮದರಾಸಿನವರನ್ನು ಆಡಿಕೊಂಡರು ಎಂಬ ಅಪವಾದ ಬಂದರೂ ಮಹಮೂದ್‌ನ ಪಾತ್ರ ಹಾಗೂ ನಿರ್ದೇಶನ ಅದ್ವಿತೀಯವಾಗಿತ್ತು. ಆ ಸಿನಿಮಾ ಎಷ್ಟು ಸಲ ನೋಡಿದರೂ ಬೇಜಾರಾಗದ ಚಿತ್ರ. ಹಾಡುಗಳೂ ಅಷ್ಟೆ. ಹಾಡಿಗೆ ಬಳಸಬಹುದಾದ ವಾದ್ಯ ಸಲಕರಣೆಗಳನ್ನು ನೋಡಿಯೇ ನಗುಬರುತ್ತೆ. ಹಾಡಲು ಬಾರದ ನಾಯಕನಿಗೆ ಪ್ಲೇಬ್ಯಾಕ್ ಕೊಟ್ಟು ಅದರಿಂದ ಆಗುವ ಗೊಂದಲವನ್ನು ಇದಕ್ಕಿಂತ ಪರಿಣಾಮಕಾರಿಯಾಗಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಸಾಬೀತು ಮಾಡಿದರು. ವಯಸ್ಸಾದ ಡ್ಯಾನ್ಸ್ ಮಾಸ್ಟರು ತರುಣಿಯರನ್ನು, ಸುಂದರಿಯಾದ ಶಿಷ್ಯೆಯನ್ನು ಮದುವೆಯಾಗುವ ದುರಾಸೆ ಹೊಂದಿದ್ದಾನೆ ಎಂದು ಕೋಪ ಬಂದರೂ, ಮಾನವ ಸಹಜವಾದ ಆಸೆಯಿಟ್ಟು ಅವನು ನಿರಾಶನಾದಾಗ ಅಯ್ಯೋ ಪಾಪ ಅನ್ನಿಸುವಷ್ಟು ಪಾತ್ರವನ್ನು ಪೋಷಿಸಿದ್ದಾರೆ.

ಗುಮ್‌ನಾಮ್ ಚಿತ್ರದಲ್ಲಿ ಅವರು ಆಡಿದ ಮಾತು ಅಥವಾ ಹಾಡಿದ್ದು ''ಹಮ್ ಕಾಲೆ ಹೈತೋ ಕ್ಯಾ ಹುವಾ ದಿಲ್‌ವಾಲೆ ಹೈ'' ಬಹುಶಃ ಎಲ್ಲಾ ಕಾಲಕ್ಕೂ ಸಲ್ಲುವ ಹಾಡು. ಕಪ್ಪಗಿರುವವರೆಲ್ಲರಿಗೂ ಅನ್ವಯವಾಗುವ ಈ ಹಾಡು ಅತ್ಯಂತ ಜನಪ್ರಿಯವಾಗಿ ರುವುದರಲ್ಲಿ ಆಶ್ಚರ್ಯವೇನಿಲ್ಲ.

ಮಹಮೂದ್‌ರ ಬಾಡಿ ಲಾಂಗ್ವೆಜ್ ಬಗ್ಗೆ ಬಹಳ ಆರೋಪಗಳಿರುವುದು ನಿಜ. ಪ್ರಪೋಶನ್‌ನಿಂದ ಹಿಡಿದು ಅವರ ಎಲ್ಲಾ ಸಿನಿಮಾಗಳಲ್ಲಿ ಅವರ ಕೈ ಕಾಲು ಬಾಯಿಗಳು ಹೆಚ್ಚು ಮಾತನಾಡತೊಡಗಿತು. ಹಾಸ್ಯಪಾತ್ರಕ್ಕೆ ಇವುಗಳ ಅವಶ್ಯಕತೆ ಇತ್ತು ಎಂದು ಆಗ ಅವರು ನಂಬಿರಬೇಕು. ಏಕೆಂದರೆ ರಾಜಕಪೂರ್ ಜೊತೆ ನಟಿಸಿರುವ ನಜ಼ರಾನ್ ಸಿನಿಮಾದಲ್ಲಿ ಯಾವ ಒಂದು ಅಂಗಚೇಷ್ಟೆಗಳಿಲ್ಲದೆ ಬಹಳ ಒಳ್ಳೆಯ ನಟನೆ ಮಾಡಿದ್ದಾರೆ.

ಹಾಸ್ಯ ಪಾತ್ರಗಳೆಂದರೆ ಅವನೂ ಸ್ವಲ್ಪ ವಿಕಾರವಾಗಿರಬೇಕು ವಿಚಿತ್ರವಾಗಿ ಬಟ್ಟೆ ಧರಿಸಿರಬೇಕು, ಜುಟ್ಟು ಇರಬೇಕು ಹೀಗೆಲ್ಲ ಹಾಸ್ಯ ಪಾತ್ರಗಳನ್ನು ಸೃಷ್ಟಿಸಿದರು. ನಮ್ಮ ಕನ್ನಡ


ಸಿನಿಮಾವನ್ನೇ ಉದಾಹರಣೆಗೆ ತೆಗೆದುಕೊಂಡರೆ ನರಸಿಂಹರಾಜು ತಮ್ಮ ಪಾತ್ರದಲ್ಲಿ ಹಲ್ಲುಬ್ಬು ಇದ್ದಂತೆ ಕೃತಕವಾಗಿ ತೋರಿಸಿಕೊಂಡು ಬಂದರು. ಅವರ ಹಲ್ಲುಗಳು ಚೆನ್ನಾಗೆ ಇವೆ ಎಂದು ತಿಳಿಯಬೇಕಾದರೆ ಬಹಳ ವರ್ಷಗಳಾಗಬೇಕಾಯಿತು, ಬಹುಶಃ ಪ್ರೊಫೆಸರ್ ಹುಚ್ಚುರಾಯ ಬಂದಾಗ ತನ್ನಂತಹ ಅನೇಕರಿಗೆ ಗೊತ್ತಾದುದು. ಬಟ್ಟೆಯೆಂದರೆ ಕಚ್ಚೆಪಂಚೆ, ಜುಟ್ಟು ಹೀಗೆ ಕೆಟ್ಟದಾಗಿ ಕಾಸ್ಟೂಮ್ ಧರಿಸಿದರೆ ನಗಿಸುವುದಕ್ಕೆ ಸುಲಭ ಅನ್ನಿಸಿರಬೇಕು. ಮಾತಿನಲ್ಲಿ ನಗುವ ಸಾಧ್ಯತೆ ಇದ್ದರೂ ನಿರ್ದೇಶಕರಿಗೆ ನಂಬಿಕೆ ಬರಲಿಲ್ಲ. ಈಗ ಕಾಲ ಬದಲಾಗಿದೆ. ಕಮಲಹಾಸನ್ ಬಂದಮೇಲೆ ಅರ್ಥವಾಯ್ತು ಒಳ್ಳೆ ಡ್ರೆಸ್ ಹಾಕಿಕೊಂಡೇ, ಒಳ್ಳೇ ರೂಪವಿಟ್ಟುಕೊಂಡೆ ಪ್ರೇಕ್ಷಕರನ್ನು ನಗಿಸಬಹುದು ಎಂದು. ಮಹಮೂದ್ ಕೂಡ ಆನಂತರ ತಮ್ಮ ಅಂಗಚೇಷ್ಟೆಗಳನ್ನು ಕಮ್ಮಿ ಮಾಡಿದರು. ಪ್ಯಾರ್ ಕೀಯ ಜಾ ಅವರ ಅದ್ಭುತ ಕಲೆಗಾರಿಕೆ. ಕತೆ ಹೇಳುವ ಸೀನ್ ಎಲ್ಲರ ಗಮನ ಸೆಳೆದಿತ್ತು.

ಮಹಮೂದ್ ಕೂಡ ಚಾರ್ಲಿ ಚಾಪ್ಲಿನರಂತೆ ನಗುವಿನ ಹಿಂದೆ ನೋವನ್ನು ತೋರಿಸಿದವರು. ಅವರು ಮಾಡಿದ / ಸೃಷ್ಟಿಸಿದ ಪಾತ್ರಗಳಲ್ಲಿ ಒಂದು ಒಳ್ಳೆ ಮೆಸೇಜ್ ಇಟ್ಟಿರುತ್ತಿದ್ದರು. ಪೋಲಿಯೊಗೆ ತುತ್ತಾದ ತನ್ನ ಮಗನ ಕಥೆಯನ್ನು ಕುವ್ವಾರ ಬಾಪ್‌ನಲ್ಲಿ ಪೇಯಿಂಟ್ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಫಾರ್ಮ್‌ಹೌಸ್ ಮಾಡಿದ್ದು ಬೆಂಗಳೂರಿನ ಪ್ರೀತಿಯಿಂದ. ಜನತಾ ಹವಲ್ದಾರ್ ಸಿನಿಮಾವನ್ನು ಬೆಂಗಳೂರಿನಲ್ಲೇ ಪೂರ್ಣಪ್ರಮಾಣದಲ್ಲಿ ಚಿತ್ರೀಕರಿಸಿದರು. ಅವರು ದಕ್ಷಿಣದವರನ್ನು ಗೇಲಿ ಮಾಡಿದರು ಎಂದು ತಿಳಿಯುವುದು ಶುದ್ಧ ಚೇಷ್ಟೆ. ಅವರಿಗೆ ದಕ್ಷಿಣದವರನ್ನು ಕಂಡರೆ ಹಾಗೂ ದಕ್ಷಿಣ ಭಾಗವನ್ನು ಇಷ್ಟಪಟ್ಟರು ಎಂಬುದು ಅವರ ಚಿತ್ರೀಕರಣ ಮಾಡಿದ್ದೇ ಸಾಕ್ಷಿ. ಕೆ.ಆರ್.ಎಸ್.ನ್ನು ಬಹಳ ವಿಸ್ತಾರವಾಗಿ ಪಡೋಸನ್‌ಗೆ ತೋರಿಸಿದ ಮೇಲೆ ಬಹಳಷ್ಟು ಹಿಂದಿ ಚಲನಚಿತ್ರಗಳಲ್ಲಿ ಅದು ಅನಿವಾರ್ಯ ಚಿತ್ರೀಕರಣದ ಸ್ಥಳವಾಗಿದ್ದು ಚರಿತ್ರೆ. ದಕ್ಷಿಣದವರು ಹಿಂದಿ ಮಾತನಾಡುವ ಶೈಲಿ ಅವರು ತೋರಿಸಿದರಷ್ಟೆ ಆನಂತರ ಬೇರೆಯವರೆಲ್ಲರು ಅವನ್ನು ಕಾಪಿ ಮಾಡಿದರು. ಹೀಗಾಗಿ ದಕ್ಷಿಣದ ನಗರಗಳಿಗೆ ಮಹಮೂದ್ ತಮ್ಮನ್ನು ಹೆಚ್ಚು ಲೇವಡಿ ಮಾಡಿದ ಅನ್ನಿಸಿರಬೇಕಷ್ಟೆ.

ಹಾಸ್ಯ ನಟನನ್ನು ನಾಯಕನ ಸೈಡ್‌ಕಿಕ್ ಎಂದು ಹೇಳುತ್ತಿದ್ದ ಕಾಲದಲ್ಲಿ ಮಹಮೂದ್ ನಟಿಸುತ್ತಿದ್ದ ಎಂದು ಖಚಿತ ಪಡಿಸಿಕೊಂಡ ಮೇಲೆ ಕೆಲವು ನಾಯಕರು ಒಪ್ಪಂದಕ್ಕೆ ಸಹಿ ಹಾಕುತ್ತಿದ್ದರೆಂದರೆ ಮಹಮೂದ್‌ನಿಗೆ ಎಷ್ಟು ಹೆದರುತ್ತಿದ್ದಾರೆಂಬುದು ಸ್ಪಷ್ಟ. ಮಹಮೂದ್‌ನಿದ್ದರೆ ನಾಯಕನೇ ಸೈಡ್‌ಕಿಕ್ ಆಗುವ ಸಾಧ್ಯತೆ ಇತ್ತು. ಅಷ್ಟೊಂದು ಅದ್ಭುತ ಪರಿಣಾಮಕಾರಿ ವಲಯ ಸೃಷ್ಟಿಸುತ್ತಿದ್ದರು. ಅಂತಹ ಮಹಮೂದ್‌ನಿಗೆ ನಾವು ಸಲ್ಲಿಸುವ ಅರ್ಥಪೂರ್ಣ ಶ್ರದ್ಧಾಂಜಲಿ ಎಂದರೆ ಅವರ ನೆನಪಿನಲ್ಲಿ ಒಂದು ಶುದ್ಧವಾದ ಪರಿಣಾಮಕಾರಿಯದ ಪೂರ್ಣಪ್ರಮಾಣದ ಹಾಸ್ಯ ಚಿತ್ರ ಮಾಡುವುದು.

– ಕೃಷ್ಣ ಸುಬ್ಬರಾವ್



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಎಲ್.ಎಸ್. ಶೇಷಗಿರಿರಾವ್

104ನೆಯ ವಯಸ್ಸಿನಲ್ಲಿ 2003 ರಲ್ಲಿ ನಿಧನರಾದ ಎ.ಎನ್. ಮೂರ್ತಿರಾಯರು ಕಳೆದ ಶತಮಾನದ ಶ್ರೇಷ್ಠ ವಿದ್ವಾಂಸರು, ಚಿಂತನಶೀಲರು. ಅವರ ಹಾಸ್ಯಪ್ರಜ್ಞೆ ಸೂಕ್ಷ್ಮವಾದದ್ದು, ನಿರ್ಮಲವಾದದ್ದು.

'ಪ್ಯಾರಡಿ' ಎನ್ನುವುದು ಸಾಹಿತ್ಯದ ಒಂದು ಪ್ರಕಾರ. ಇದು ಅಣಕು ಸಾಹಿತ್ಯ. ಒಂದು ಕೃತಿಯನ್ನು, ಹಾಸ್ಯ ಉಕ್ಕಿಸುವಂತೆ ಅಣಕವಾಡುವುದು, ಅನುಕರಿಸುವುದು ಇದರ ವಿಧಾನ. ಸಾಮಾನ್ಯವಾಗಿ ಯಾವ ಕೃತಿಯನ್ನು ಅನುಕರಿಸಿದೆಯೋ ಅದನ್ನು ಹಾಸ್ಯ ಮಾಡುವುದು ಇದರ ಉದ್ದೇಶ. ಕೆಲವೊಮ್ಮೆ ಈ ಉದ್ದೇಶವಿಲ್ಲದೆ ನಗೆಯುಕ್ಕಿಸುವುದಷ್ಟೆ ಇದರ ಗುರಿ. 'ವ್ಯಾಘ್ರಗೀತೆ' ಇಂಥ ಬರಹ.

ಹಸು ಪುಣ್ಯಕೋಟಿಯ ಕಥೆಯನ್ನು ಹೇಳುವ 'ಗೋವಿನ ಕಥೆ'ಯನ್ನು ಎಲ್ಲರೂ ಬಲ್ಲರು. ಅದರ 'ಪ್ಯಾರಡಿ' ಈ ಬರಹ 'ಗೋವಿನ ಕಥೆ' ಮನುಷ್ಯರ ಭಾವಗಳು, ರೀತಿಗಳನ್ನು ಒಂದು ಹಸು ಮತ್ತು ಒಂದು ಹುಲಿಗೆ ಆರೋಪಿಸಿ ಮನಸ್ಸನ್ನು ಕರಗಿಸುವ ಮತ್ತು ಒಂದು ಉದಾತ್ತ ನೀತಿಯನ್ನು ಬೆಳಗುವ ಕಥೆಯನ್ನು ಹೇಳಿತು. ಮೂರ್ತಿರಾಯರು ಮನುಷ್ಯರ ಭಾವಗಳನ್ನು ಒಂದು ಹುಲಿಗೆ ಆರೋಪಿಸಿ ಒಂದು ವಿನೋದದ ಕಥೆಯನ್ನು ಹೇಳುತ್ತಾರೆ. ಒಂದು ಹಸಿದ ಹುಲಿ-ಏಕಾಕಿ ಮನುಷ್ಯ ಇವರ ಮುಖಾಮುಖಿ ಕಾಡಿನಲ್ಲಿ ರಾತ್ರಿ ಆಗುವುದು ಭಯವನ್ನು ಹುಟ್ಟಿಸುವ, 'ಸಸ್ಪೆನ್ಸ್' ಹುಟ್ಟಿಸುವ ಸನ್ನಿವೇಶ. ಹುಲಿಗೆ ವಂಶಪ್ರಜ್ಞೆಯನ್ನು ಆರೋಪಿಸುವುದಷ್ಟೇ ಈ ಗಾತ್ರದ ಬರಹವನ್ನು ನಡೆಸಿಕೊಂಡು ಬರಲಾರದು. ಮೂರ್ತಿರಾಯರ ವೃತ್ತಾಂತ ಕೌಶಲ, 'ಕಾಮಿಕ್' ಸನ್ನಿವೇಶದಲ್ಲಿಯೂ ಒಂದು ವಿಶಿಷ್ಟ ರೀತಿಯ 'ಸಸ್ಪೆನ್ಸ್' ಅನ್ನು ಉಂಟುಮಾಡಿ ಉಳಿಸಿಕೊಂಡು ಹೋಗುವ ಕೌಶಲ್ಯ ಇವು ಗಮನಿಸಬೇಕಾದಂಥವು.

★★★

ವ್ಯಾಘ್ರಗೀತೆ

- ಎ.ಎನ್. ಮೂರ್ತಿರಾಯರು

''ಎಲೆ ಬೆಕ್ಕೆ ರೂಪಿನಿಂದಲೆ ಹುಲಿಯ ಜಾತಿಗೆ ಸೇರ್ದೆನೆಂದು ಗರ್ವಿಸಬೇಡ'' ಎಂದು ಬರೆದ ಕವಿಯ ವಿಷಯದಲ್ಲಿ ನನಗೆ ಬಹಳ ಗೌರವವುಂಟು. ಆತ ಹುಲಿಯನ್ನು ಕೇವಲ ಹಿಂಸ್ರಪಶುವೆಂದು ತಿರಸ್ಕರಿಸಲಿಲ್ಲ. ಅದರ ಜಾತಿಗೆ ಸೇರುವುದು ಹೆಮ್ಮೆಯ ವಿಷಯವೆಂದು ಮನಗಂಡಿದ್ದನು. ಆದರೆ ಈ ಸೂಕ್ಷ್ಮ ಬುದ್ಧಿಯ ಕವಿಯೂ ಕೂಡ ಹುಲಿಯ ಬಲುಮೆಯನ್ನು ಹೊಗಳಿದನೇ ಹೊರತು ಆ ಪ್ರಾಣಿಯಲ್ಲಿರುವ ಇತರ ಸದ್ಗುಣಗಳನ್ನು ಕಾಣಲಾರದೆ ಹೋದ. ಹುಲಿ ಪ್ರಾಣಿಗಳನ್ನು ಕೊಂದು ತಿನ್ನುವುದೇನೋ ಉಂಟು. ಆದರೆ ನಿಷ್ಪಕ್ಷಪಾತವಾದ ದೃಷ್ಟಿಯಿಂದ ನೋಡಿದರೆ ಅದರಲ್ಲಿ ತಪ್ಪೇನಿದೆ? ಹುಟ್ಟಿಸಿದ ದೇವರು ''ಹುಲ್ಲು ಮೇಯಿಸುವುದಿಲ್ಲ, ಮಾಂಸವನ್ನೇ ಮೇಯಿಸುತ್ತೇನೆ'' ಎಂದು ವಚನಕೊಟ್ಟೇ ಹುಲಿಯನ್ನು ನಿರ್ಮಿಸಿದ್ದಾನೆ. ಶಾಕಾ ಹಾರವನ್ನು ತಿಂದು ಬದುಕಬಹುದಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ ಹುಲಿಯಲ್ಲಿ ಅದೊಂದು ದೊಡ್ಡ ಅಪರಾಧವೇ? ಅದು ಆಹಾರಕ್ಕಾಗಿ ಕೊಲ್ಲುವುದರಲ್ಲೇನೂ ತಪ್ಪಿಲ್ಲ; ಹಾಗೆ ಕೊಲ್ಲುವಾಗ ಯಾವುದಾದರೊಂದು ಧರ್ಮವನ್ನು ಅನುಸರಿಸಿ ಕೊಲ್ಲುತ್ತದೆಯೆ, ಅಥವಾ ಧರ್ಮಾಧರ್ಮಗಳ ಲೆಕ್ಕವನ್ನೇ ಇಡದೆ ಸ್ವಾಚ್ಛಂದ್ಯದಿಂದ ವರ್ತಿಸುತ್ತದೆಯೆ ಎಂಬುದೇ ಮುಖ್ಯ ಪ್ರಶ್ನೆ.

ಹುಲಿಗೆ ಧರ್ಮವೇನು ಬಂತು, ಎನ್ನಬಹುದು. ಇತರ ದೇಶಗಳಲ್ಲಿರುವ ಹುಲಿಗಳ ವಿಷಯ ಹೇಗೋ ನನಗೆ ತಿಳಿಯದು. ಆದರೆ ಯಾವ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ, ಭಗವದ್ಗೀತೆಯಂಥ ಗ್ರಂಥ ಉದ್ಭವಿಸಿತೋ, ಆ ಭರತ ಭೂಮಿಯಲ್ಲಿ ಹುಲಿಗಳಾದರೂ ಅಧರ್ಮಕ್ಕೆಡೆಗೊಡುವುದುಂಟೆ? ಈಚೆಗೆ ನನ್ನ ಬಂಧು ಕೃಷ್ಣಮೂರ್ತಿ ತನ್ನ ವಂಶದವರೊಬ್ಬರ ಅನುಭವದ ಕಥೆಯನ್ನು ಹೇಳಿದ. ಅದನ್ನು ಕೇಳಿದ ಮೇಲೆ ನನಗೆ ಹುಲಿಯ ಧರ್ಮಶ್ರದ್ಧೆಯ ಅರಿವಾಯಿತು. ಅದರ ವಿಷಯದಲ್ಲಿ ಮನಸ್ಸು ಆರ್ದ್ರವಾಯಿತು. ನನ್ನನ್ನು ನೋಡಿದರೆ ಅದರ ಬಾಯಿ ಆರ್ದ್ರವಾಗಬಹುದು; ಆದರೆ ಅದು ಇಲ್ಲಿ ಪ್ರಕೃತ ವಿಷಯವಲ್ಲ.

ಕೃಷ್ಣಮೂರ್ತಿಯ ಅಜ್ಜಂದಿರು ತುಮಕೂರು ಜಿಲ್ಲೆಯಲ್ಲಿ ಒಂದು ಹಳ್ಳಿಯವರು. ಅಷ್ಟೇನೂ ಐಶ್ವರ್ಯವಂತರಲ್ಲದಿದ್ದರೂ ಹಿಂದೆ ಚೆನ್ನಾಗಿ ಬದುಕಿ ಬಾಳಿದ ಮನೆತನ. ಅವರ ಹಿರಿಯರು ಸಣ್ಣದೊಂದು ಸಂಸ್ಥಾನದಲ್ಲಿ ಮಂತ್ರಿಯಾಗಿದ್ದು ತಮ್ಮ ರಾಜಭಕ್ತಿಗಾಗಿ ಹೆಸರು ಪಡೆದವರು. ನಮ್ಮ ಕಥಾನಾಯಕರ ಕಾಲಕ್ಕೆ ಮಂತ್ರಿತ್ವ ಹೋಗಿ ಕೇವಲ ಶಾನುಭೋಗಿಕೆ ಮಾತ್ರ ಉಳಿದಿತ್ತು. ಆದರೂ ನಮ್ಮ ಶಾನುಭೋಗರು ತಮ್ಮ ವಂಶದ ಕೀರ್ತಿಗೆ ಕುಂದು ತರದಂತೆ ಖಿರ್ದಿ ಪುಸ್ತಕವನ್ನು ನಿಷ್ಠೆಯಿಂದ ಕಾಪಾಡಿಕೊಂಡು ಮಸಿಯ

ಕಾಣಿಕೆಗಾಗಿ ರೈತರನ್ನು ಪೀಡಿಸದೆ, ವಸೂಲಾದ ಹಣವನ್ನು ದಸ್ತುಮಾಡದೆ, ದೇವರು ಕೊಟ್ಟಷ್ಟರಲ್ಲಿ ತೃಪ್ತಿಗೊಂಡು ಜೀವನ ನಡೆಸುತ್ತಿದ್ದರು. ಅವರ ಭಾಗಕ್ಕೆ ಖಿರ್ದಿ ಪುಸ್ತಕ ಕೇವಲ ಜೀವನದ ಆಧಾರವಲ್ಲ; ಅವರ ರಾಜಭಕ್ತಿಯ ಲಾಂಛನ.

ಒಂದು ಬಾರಿ ಅವರು ಇರಸಾಲಿಗಾಗಿ ಚಿಕ್ಕನಾಯಕನಹಳ್ಳಿಗೆ ಹೋಗಿದ್ದರು. ಖಜಾನೆಗೆ ಹಣ ಕಟ್ಟಿ, ಸ್ನೇಹಿತರನ್ನು ನೋಡಿಕೊಂಡು ಅಲ್ಲಿಂದ ವಾಪಸು ಹೊರಡುವ ವೇಳೆಗೆ ಸಂಜೆ ಆರು ಘಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕು. ಕಾಡುದಾರಿ. ಆದರೂ ಬೆಳುದಿಂಗಳ ದಿನ; ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದುಕೊಂಡು ಬೇಗ ಬೇಗ ನಡೆದರು. ಅವರು ಬಹಳ ಕರ್ಮಠರಾದ್ದರಿಂದ ಬೆಳಗ್ಗೆ ಮನೆಯಲ್ಲಿ ಊಟ ಮಾಡಿದ್ದೇ ಹೊರತು ಬೇರೆ ಯಾವ ಉಪಾಹಾರವನ್ನೂ ತೆಗೆದುಕೊಂಡಿರಲಿಲ್ಲ. ಹೆಂಡತಿ ಮಾಡಿಟ್ಟಿರಬಹುದಾದ ರಸದೂಟದ ಕಲ್ಪನೆ ಶಾನುಭೋಗರ ಕಾಲಿಗೆ ಮತ್ತಷ್ಟು ಚುರುಕು ಕೊಟ್ಟಿತು. ಆದರೂ ಕಣಿವೆಗೆ ಬರುವ ವೇಳೆಗೆ ಆಗಲೇ ರಾತ್ರಿ ಹೆಜ್ಜೆಯಿಟ್ಟಿತ್ತು. ಮರಗಳ ನೆರಳಿನ ನಡುವೆ ಅಲ್ಲಲ್ಲಿ ಕದ್ದು ಬಂದ ಬೆಳದಿಂಗಳು ಕತ್ತಲೆಯನ್ನು ಹೆಚ್ಚು ಮಾಡಿತೆಂದೇ ಹೇಳಬೇಕು. ಆ ಅಸ್ಪಷ್ಟವಾದ ಬೆಳಕಿನಲ್ಲಿ ಕಾಡಿನ ಗಿಡ ಮರಗಳೂ ಬಂಡೆಗಳೂ ಚಿತ್ರ ವಿಚಿತ್ರವಾದ ರೂಪಗಳನ್ನು ತಾಳುವುವು. ನೆರಳು ಅಲ್ಲಾಡಿದರೆ ಎದುರಿಗೆ ಯಾರೋ ಬಂದಂತಾಗುವುದು. ಎಲೆಗಳು ಅಲುಗಿದರೆ ಮೈ ನಡುಗುವುದು. ಜೊತೆಗೆ ಆಗಿಂದಾಗ ನರಿಗಳ ಹುಯಿಲು ಬೇರೆ. ನಿರ್ಜನವಾದ ಪ್ರದೇಶ; ಅವೇಳೆ; ಯಾರಿಗಾದರೂ ಭಯವಾಗುವ ಸನ್ನಿವೇಶ. ಶಾನುಭೋಗರೇನೋ ಗಟ್ಟಿ ಮನಸ್ಸಿನವರೇ; ಅಲ್ಲದೆ ಆ ದಾರಿಯನ್ನು ಎಷ್ಟೋ ಸಾರಿ ತುಳಿದಿದ್ದವರು. ಆದರೂ ಮನಸ್ಸು ಆಗಾಗ ಅಳುಕದಿರಲಿಲ್ಲ. ಹಸಿವಿನ ಜೊತೆಗೆ ಭಯವೂ ಸೇರಿ ಅವರ ಕಾಲು ಮತ್ತಷ್ಟು ಚುರುಕಾಯಿತು.

ಆ ರಾತ್ರಿ ಹಸಿದಿದ್ದವರು ಶಾನುಭೋಗರೊಬ್ಬರೇ ಅಲ್ಲ. ರಸ್ತೆಗೆ ಸ್ವಲ್ಪ ದೂರದಲ್ಲೇ ಇದ್ದ ಗುಹೆಯಲ್ಲಿ ಹುಲಿಯೊಂದು ಮಲಗಿತ್ತು. ದಿನವೆಲ್ಲಾ ನಿದ್ದೆಮಾಡಿ ಆಗ ತಾನೆ ಆಕಳಿಸುತ್ತ ಎದ್ದ ಹುಲಿಗೆ ತನ್ನ ಹೊಟ್ಟೆ ಬರಿದಾಗಿದೆಯೆಂದು ಭಾಸವಾಯಿತು. ಶಾನುಭೋಗರಂತೆಯೇ ಅದಕ್ಕೂ ರಸದೂಟದ ಕನಸು. ನಿದ್ದೆಯ ಜಡರನ್ನು ಕಳೆದುಕೊಂಡು ಇನ್ನು ಬೇಟೆಗೆ ಹೊರಡಬೇಕು. ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸುತ್ತಾ ಒಂದೆರಡು ಸಾರಿ ಮೈ ಮುರಿದು ಹೊರಟಿತು. ಬಂಡೆಗಳ ಮರೆಯಲ್ಲೇ ನಡೆಯುತ್ತಿದ್ದಾಗ ಇದ್ದಕ್ಕಿದ್ದ ಹಾಗೆಯೇ ಮಧುರವಾದ ಗಂಧವೊಂದು ಅದರ ಘ್ರಾಣೇಂದ್ರಿಯವನ್ನು ಆಕ್ರಮಿಸಿತು. ಅದು ಚೆನ್ನಾಗಿ ಪರಿಚಿತವೂ ಅಲ್ಲ, ತೀರ ಅಪರಿಚಿತವೂ ಅಲ್ಲ. ಹಿಂದೆ ಎಂದೋ ಅಂಥದೇ ಮನಮೋಹಕವಾದ ಸುವಾಸನೆಯ ಅನುಭವವಾಗಿದೆ. ಯಾವುದಿರಬಹುದು, ಆ ವಾಸನೆ? ಜಿಂಕೆಯ ವಾಸನೆಯಂತೂ ಅಲ್ಲ. ಇನ್ನೂ ಮೊನ್ನೆತಾನೆ ಜಿಂಕೆಯನ್ನು ಕೊಂದಿರಲಿಲ್ಲವೆ! ಅಲ್ಲ, ಅದು

ಜಿಂಕೆಯ ವಾಸನೆಯಲ್ಲ; ಅದಕ್ಕಿಂತ ಸಾವಿರ ಪಾಲು ಹಿತಕರವಾದದ್ದು. ಆಹಾರ, ನೆನಪಾಯಿತು - ಎರಡು ವರ್ಷಗಳ ಹಿಂದೆ ಸುಮಾರು ಅದೇ ಹೊತ್ತಿನಲ್ಲಿ ಸಿಕ್ಕಿದ್ದನಲ್ಲ, ಆ ಬ್ರಾಹ್ಮಣ! ಅದೆಂಥ ಸುಖಕರವಾದ ಅನುಭವ! ಅಂದಿನವರೆಗೆ ತಾನು ಬ್ರಾಹ್ಮಣಭೋಜನ ಮಾಡಿರಲಿಲ್ಲ. ಸಾಧಾರಣವಾಗಿ ಈ ಮಾನವರು ಕೃತ್ರಿಮಿಗಳು; ಕತ್ತಿಯೋ, ದೂರದಿಂದಲೇ ಕೆಂಡವನ್ನುಗುಳಿ ಕೊಲ್ಲುವ ಆ ಬಂದೂಕೋ - ಏನಾದರೂ ಒಂದನ್ನು ಕೈಯಲ್ಲಿಟ್ಟುಕೊಂಡಿರುತ್ತಾರೆ. ಆದರೆ ಅಂದೇನೋ ಸುಲಭವಾಗಿ ಆತನನ್ನು ಕೊಲ್ಲುವ ಸುಸಂಧಿ ಒದಗಿತು. ಆತನ ಮಾಂಸದ ರುಚಿ ಹಲ್ಲಿಗೆ ಇಳಿದ ಮೇಲೆ ತನಗೆ ಜಿಂಕೆಯ ಮಾಂಸ ಸಹ ರುಚಿಸದಂತಾಯಿತು. ಆಶ್ಚರ್ಯ! ತಾನು ಮಾಂಸಾಹಾರಿ. ಆದರೂ ತನಗೆ ಇತರ ಮಾಂಸಾಹಾರಿಗಳನ್ನು ತಿನ್ನುವುದೆಂದರೆ ಬೇಸರ. ಶಾಕಾಹಾರಿಗಳ ಮಾಂಸವೆಂದರೆ - ಆ ರುಚಿ ಅವರ್ಣನೀಯ! ಜಿಂಕೆಯ ಮಾಂಸದಲ್ಲೂ ಬ್ರಾಹ್ಮಣರ ಮಾಂಸದಲ್ಲೂ ಅದೇ ವೈಶಿಷ್ಟ್ಯ. ಇದೇ ಸೃಷ್ಟಿಯ ವೈಚಿತ್ರ್ಯವೆನ್ನುವುದು.... ಕ್ಷಣಕಾಲ ಹುಲಿ ತತ್ತ್ವ ವಿಚಾರಕ್ಕೆ ಮನಸ್ಸು ಕೊಟ್ಟಿತು. ಆರಣ್ಯಕಗಳ ಕಾಲದಿಂದಲೂ ಭಾರತೀಯರ ರಕ್ತದಲ್ಲಿ ಬಂದದ್ದಲ್ಲವೆ, ಈ ತತ್ತ್ವಾನ್ವೇಷಣೆಯ ಆಸಕ್ತಿ? ಆದರೆ ಸದ್ಯದಲ್ಲಿ ತತ್ತ್ವ ವಿಚಾರಕ್ಕಿಂತ ಉದರಪೋಷಣೆಯ ಅವಶ್ಯಕತೆ ಹೆಚ್ಚಾಗಿತ್ತು. 'ಅನ್ನಂ ಬ್ರಹ್ಮೇತಿ ವ್ಯಜಾನಾತ್.' ಅನ್ನಬ್ರಹ್ಮನ ಸಾಕ್ಷಾತ್ಕಾರವಾಗಿ ಐದು ಹಂತಗಳನ್ನೇರಿದ ಮೇಲಲ್ಲವೆ, 'ಆನಂದೋ ಬ್ರಹ್ಮೇತಿ ವ್ಯಜಾನಾತ್' ಎನ್ನಬೇಕಾದರೆ? ಹುಲಿಯು ಬಾಯಲ್ಲಿ ಒಸರುತ್ತಿದ್ದ ದ್ರವವನ್ನು ಹಾಗೆಯೇ ನುಂಗಿಕೊಂಡು ಆ ಸುವಾಸನೆಯ ಜಾಡನ್ನೇ ಹಿಡಿದು ನಿಶ್ಶಬ್ದವಾಗಿ ನಡೆಯುತ್ತಾ ರಸ್ತೆಯ ಬಳಿಗೆ ಬಂದು ಶಾನುಭೋಗರನ್ನು ಕಂಡಿತು. ಅವರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು. ''ಇಂದೇನೋ ದೇವರ ಕೃಪೆ. ಎರಡು ವರ್ಷದ ಮೇಲೆ ಮತ್ತೆ ನಿರಾಯುಧನಾದ ಮನುಷ್ಯ ಸಿಕ್ಕಿದ. ಅದರಲ್ಲೂ ಶಾಕಾಹಾರಿ, ಬ್ರಾಹ್ಮಣ! ಇದು ತನ್ನ ಪೂರ್ವಜನ್ಮದ ತಪಃಪೂಜಾದಿಗಳ ಫಲ,'' ಎಂದುಕೊಂಡಿತು. ಹುಲಿ ಲೋಪದೋಷ ಪ್ರಾಯಶ್ಚಿತ್ತಾರ್ಥವಾಗಿ ನಾಮತ್ರಯ ಮಂತ್ರವನ್ನು ಜಪಿಸದೆ ಮರೆತಿರಬೇಕು. ಏನು ಲೋಪವಿತ್ತೋ ಏನೋ; ಅಂತೂ ಹುಲಿಯ ಆನಂದಕ್ಕೆ ಕೊರತೆ ಒಂದಿತ್ತು. ಆ ಶಾನುಭೋಗರು ಹುಲಿಗೆ ಅಭಿಮುಖರಾಗಿರದೆ ಅದರ ಕಡೆಗೆ ಬೆನ್ನು ತಿರುಗಿಸಿ ನಡೆಯುತ್ತಿದ್ದರು. ಯಾರನ್ನೇ ಆಗಲಿ, ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೆ, ಆತ ಬೆನ್ನು ತಿರುಗಿಸಿದಾಗ ಕೊಲ್ಲುವುದು ಆರ್ಯಧರ್ಮವಲ್ಲವಷ್ಟೆ. ಪರಾಙ್ಮುಖವಧೆ ಮಾಡಿದ್ದರಿಂದಲ್ಲವೇ ಶ್ರೀರಾಮನಿಗೆ ಸಹ ಅಪಕೀರ್ತಿ ಬರುವ ಸಂಭವವೊದಗಿತು!

ನಸ್ಮರೇದ್ವಾಲಿಹಂತಾರಂ ರಾಘವಂ ಧರ್ಮಬಾಹಿರಂ॥

ಎಂದು ಶ್ರೀರಾಮನನ್ನೂ ಕೂಡ ಖಂಡಿಸಿದ ನಾಡು, ನಮ್ಮ ನಾಡು. ಈ ಖಂಡನೆಯನ್ನು ಶ್ರೀರಾಮನ ವಿಷಯದಲ್ಲಿ ಒಪ್ಪಲಿ ಬಿಡಲಿ, ಪರಾಙ್ಮುಖ ವಧೆ

ಉಚಿತವಲ್ಲವೆಂಬ ಸಾಮಾನ್ಯ ತತ್ವವನ್ನೇನೋ ನಮ್ಮ ಹುಲಿ ಅಂಗೀಕರಿಸಿತ್ತು. ಸಾಮಾಮೃಗದ ವಿಷಯದಲ್ಲಿ ಸಹ ಅದು ಅಯುಕ್ತವೆಂದಮೇಲೆ ಮನುಷ್ಯನನ್ನು ಹಾಗೆ ಕೊಲ್ಲುವುದುಂಟೆ? ಅಂಥ ಕೃತ್ಯವನ್ನೇನಾದರೂ ಮಾಡಿದರೆ ನಾಳೆ ತನ್ನ ಶೌರ್ಯದ ವಿಷಯದಲ್ಲಿ ಒಡಕು ಶಬ್ದ ಹೊರಟೀತು. ಆದ್ದರಿಂದ ಹುಲಿ ಹೇಗಾದರೂ ಮಾಡಿ ಶಾನುಭೋಗರಿಗೆ ಅಭಿಮುಖವಾಗಿ ಬರಬೇಕು. ಆದರೆ ಅವರನ್ನು ಹಾದು ಮುಂದೆ ಹೋಗುವುದು ಕಷ್ಟ. ಆ ಸ್ಥಳದಲ್ಲಿ ಒಂದೆರಡು ಮರಗಳನ್ನು ಬಿಟ್ಟರೆ ಸ್ವಲ್ಪ ದೂರದವರೆಗೆ ಬಯಲು. ಸುತ್ತಲೂ ಕುರುಚಲು ಕಾಡಿದ್ದಿದ್ದರೆ ಹುಲಿಯ ಕೆಲಸ ಸುಲಭವಾಗುತ್ತಿತ್ತು. ಆ ಬ್ರಾಹ್ಮಣನೋ, ಯಾವ ಎಲೆ ಅಲುಗಿದರೂ ಮೈಯೆಲ್ಲಾ ಕಣ್ಣಾಗಿ ನೋಡುತ್ತಾನೆ. ಹುಲಿ ಬಂದ ಸುಳಿವು ಗೊತ್ತಾದರೆ ಮರ ಹತ್ತಿ ತಪ್ಪಿಸಿಕೊಳ್ಳಬಹುದು. ಹುಲಿಗೆ ಆ ವಿದ್ಯೆ ಬರದು. ಅದಕ್ಕೆ ಕಲಿಸಿದ್ದ ಚೌಷಷ್ಟಿ ಕಲೆಗಳಲ್ಲಿ ವೃಕ್ಷಾರೋಹಣ ಸೇರಿರಲಿಲ್ಲ. ಆ ಸಂದರ್ಭದಲ್ಲಿ ಏನು ಮಾಡಬೇಕೆಂದು ಯೋಚಿಸಿ ಹುಲಿ ಒಂದು ನಿಶ್ಚಯಕ್ಕೆ ಬಂತು: ನಿಶ್ಯಬ್ದವಾಗಿ ಆ ಬ್ರಾಹ್ಮಣನ ಹಿಂದೆಯೇ ನಡೆದು, ನಂತರ ಅವನ ಮುಂಭಾಗಕ್ಕೆ ನೆಗೆದು, ಕೂಡಲೆ ತಿರುಗಿ ಅವನ ಮೇಲೆ ಬೀಳಬೇಕು. ಇದು ಕಷ್ಟದ ಕೆಲಸವೆಂದು ನಮಗೆ ತೋರಬಹುದು. ಆದರೆ ಅದು ನುರಿತ ಹುಲಿ. ತನ್ನ ಪ್ರಯತ್ನ ಸಫಲವಾಗುತ್ತದೆಂಬ ಆತ್ಮವಿಶ್ವಾಸವಿತ್ತು. ಅದಲ್ಲದೆ ಹಸಿವಿನ ವೇಗವೂ ಶಾನುಭೋಗರ ಮಾಂಸಲವಾದ ದೇಹವೂ ಸಾಕಾದಷ್ಟು ಹುರುಪು ಕೊಟ್ಟವು. ತನ್ನ ಬಡಬಂಧುವಾದ ಬೆಕ್ಕಿನಂತೆ ದೇಹವನ್ನು ಹುದುಗಿಸಿಕೊಂಡು ಹುಲಿ ಮೆಲ್ಲಮೆಲ್ಲನೆ ಶಾನುಭೋಗರ ಹತ್ತಿರ ಸರಿಯಿತು.

ಇತ್ತ ಶಾನುಭೋಗರಿಕೆ ಇದ್ದಕ್ಕಿದ್ದ ಹಾಗೆಯೇ ಮನಸ್ಸಿನಲ್ಲಿ ಅಳುಕು ಹುಟ್ಟಿತು. ಪಂಚೇಂದ್ರಿಯಗಳಿಗೆ ಗೋಚರವಾಗದಿರುವಂಥ ಅಪಾಯವನ್ನು ಸೂಚಿಸುವ ಆರನೆಯ ಇಂದ್ರಿಯವೊಂದಿದೆಯೆಂದು ಬಲ್ಲವರು ಹೇಳುತ್ತಾರೆ. ಶಾನುಭೋಗರಲ್ಲಿ ಆ ಇಂದ್ರಿಯ ಜಾಗ್ರತವಾಗಿ ಹುಲಿ ಬಂದದ್ದು ಅವರಿಗೆ ತಿಳಿಯಿತು. ಅಷ್ಟು ನಿಶ್ಶಬ್ದವಾಗಿ ಹಿಂಬಾಲಿಸಬೇಕಾದರೆ ಹುಲಿಗಲ್ಲದೆ ಬೇರೆ ಮೃಗಗಳಿಗೆ ಸಾಧ್ಯವಿಲ್ಲ. ಹುಲಿಯೇ ಆದರೆ ಅದು ಹಿಂದಿನಿಂದ ಮೇಲೆ ಬೀಳುವುದಿಲ್ಲವೆಂದು ಶಾನುಭೋಗರು ಬಲ್ಲರು. ಧೈರ್ಯ ತಂದುಕೊಂಡು, ''ನಾನೇ ಹುಲಿಯಾಗಿದ್ದಿದ್ದರೆ ಈ ಸಂದರ್ಭದಲ್ಲಿ ಏನು ಮಾಡುತ್ತಿದ್ದೆ?'' ಎಂದು ಪ್ರಶ್ನೆ ಹಾಕಿಕೊಂಡರು. ಹುಲಿಗೆ ಹೊಳೆದ ಯೋಚನೆಯೇ ಅವರಿಗೂ ಹೊಳೆಯಿತು. ಆಗಲಿ, ಈ ಪಂದ್ಯದಲ್ಲಿ ಹುಲಿಯೇ ಮೊದಲನೆಯ ಗರವನ್ನು ಹಾಕಲಿ, ಎಂದುಕೊಂಡು ಅದು ಹಿಂಬಾಲಿಸುತ್ತಿರುವುದು ತಮಗೆ ತಿಳಿಯಿತೆಂದು ಪತ್ತೆಕೊಡದೆ ಸುಮ್ಮನೆ ನಡೆದರು. ಅವರ ಮೈ ಸ್ವಲ್ಪ ನಡುಗಿರಬಹುದು, ಮುಖ ಸ್ವಲ್ಪ ಬಿಳುಪೇರಿರಬಹುದು - ಆದರೆ ಎಂಥ ಸೂಕ್ಷ್ಮದೃಷ್ಟಿಯ ಹುಲಿಗಾದರೂ ಅದು ಪತ್ತೆಯಾಗದಂತೆ ಭಯವನ್ನು ಅದುಮಿದರು. ಹುಲಿ ಹತ್ತಿರ ಬಂದು ನೆಗೆಯಿತು. ಅದು ತಮ್ಮ ತಲೆಯ ಮೇಲೆ ಬರುವ ವೇಳೆಗೆ ಸರಿಯಾಗಿ ಶಾನುಭೋಗರು ಸ್ವಲ್ಪ ಬಾಗಿದರು. ಹುಲಿ ನೆಲಕ್ಕೆ ಇಳಿದು ತಮ್ಮ ಕಡೆಗೆ ತಿರುಗುವುದರೊಳಗೆ ಅವರೂ ಹಿಂದಿರುಗಿ ಬಂದ

ದಾರಿಯಲ್ಲೇ ಪುನಃ ನಡೆದರು. ಹುಲಿ ಕತ್ತೆತ್ತಿ ನೋಡಿದರೆ - ಶಾನುಭೋಗರು ಮತ್ತೆ ತನ್ನ ಕಡೆಗೆ ಬೆನ್ನು ತಿರುಗಿಸಿದ್ದಾರೆ!

ಹುಲಿಯ ಮುಖ ಪೆಚ್ಚಾಯಿತು. ಆದರೆ ಶಾನುಭೋಗರ ವಿಷಯದಲ್ಲಿ ಮೆಚ್ಚಿಕೆಯೂ ಆಯಿತು - ತನಗೆ ತಕ್ಕ ಎದುರಾಳಿಯೇ ಸಿಕ್ಕಿದನೆಂದು ಮೆಚ್ಚಿಕೆ. ತಿಂದರೆ ಇಂಥ ಬ್ರಾಹ್ಮಣನನ್ನು ತಿನ್ನಬೇಕು ಎಂದುಕೊಂಡು ಮತ್ತೊಂದು ಬಾರಿ ನೆಗೆಯಿತು. ಈ ಸಲವೂ ಹುಲಿಗೆ ಕಂಡದ್ದು ಶಾನುಭೋಗರ ಬೆನ್ನೇ, ಆದಕ್ಕೆ ಒಂದು ಕಡೆ ಹಸಿವು, ಮತ್ತೊಂದು ಕಡೆ ಹಸಿವಿಗಿಂತಲೂ ಹೆಚ್ಚಾಗಿ ತನ್ನ ಸ್ವಾಭಿಮಾನಕ್ಕೆ ಇಂಥ ಧಕ್ಕೆ ಬಂತಲ್ಲಾ ಎಂಬ ಯೋಚನೆ. ನಾಳೆ ಇತರ ವ್ಯಾಘ್ರಗಳೆದುರಿಗೆ ತನ್ನ ಗೌರವ ಎಷ್ಟಕ್ಕೆ ನಿಂತೀತು, ನಿರಾಯುಧನಾದ ಬ್ರಾಹ್ಮಣನೊಬ್ಬನಿಂದ ಚುರುಕಿನಲ್ಲಿ ಸೋಲಾಯಿತೆಂದರೆ!... ಆರ್ಷೇಯವಾಗಿ ಬಂದ ಸ್ವಧರ್ಮಕ್ಕೆ ತಿಲಾಂಜಲಿ ಕೊಟ್ಟು ಬೆನ್ನು ತಿರುಗಿಸಿದವನಾದರೂ ಆಗಲಿ, ಮೇಲೆ ಬಿದ್ದೇ ಬಿಡಲೆ ಎಂಬ ಯೋಚನೆ ಅದರ ಮನಸ್ಸಿನಲ್ಲಿ ಹೊಳೆದುಹೋಯಿತು. ಕ್ಷಣಕಾಲ ಅದರ ಮನಸ್ಸಿನಲ್ಲಿ ಗೊಂದಲ - ಸೃಷ್ಟಿ ಮೊದಲಾದಂದಿನಿಂದಲೂ ನಡೆದಿರುವ ಧರ್ಮಾಧರ್ಮಗಳ ಯುದ್ಧ.

ಆದರೆ ಆ ಗೊಂದಲ ಕ್ಷಣಕಾಲಕ್ಕಿಂತಲೂ ಹೆಚ್ಚಾಗಿ ನಿಲ್ಲಲಿಲ್ಲ. ಅದು ಸದ್ವಂಶದಲ್ಲಿ ಜನಿಸಿದ ಹುಲಿ. ''ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿ ರಕ್ತವಿದೆಕೋ'' ಎಂದು ಆ ಹಸು ಆಹ್ವಾನ ಕೊಟ್ಟಾಗ ತನ್ನ ಅಜ್ಜ ಬಾಯಿ ಚಪ್ಪರಿಸಿಕೊಂಡು ಹಸುವನ್ನು ತಿನ್ನಬಹುದಾಗಿತ್ತು. ಆದರೂ ಆ ಹುಲಿರಾಯ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನಲೊಲ್ಲದೆ ಪ್ರಾಣ ಬಿಡಲಿಲ್ಲವೆ? ಆ ಪವಿತ್ರ ಕಥೆ ಸುವರ್ಣಾಕ್ಷರದಲ್ಲಿ ಲಿಖಿತವಾಗಿ ಇಂದಿಗೂ ಹುಲಿಗಳಿಗೂ ಹಸುಗಳಿಗೂ ಆದರ್ಶವಾಗಿಲ್ಲವೆ? ಅಂಥ ಹುಲಿಯ ಮೊಮ್ಮಗನಾಗಿ ಹುಟ್ಟಿ ನಾನು ಅಧರ್ಮಕ್ಕೆ ಕೈಹಾಕುವುದೆ? ಹುಲಿಗೆ ಭಗವದ್ಗೀತೆ ನೆನಪಿಗೆ ಬಂತು: ಸ್ವಧರ್ಮೇ ನಿಧನಂ ಶ್ರೇಯಃ, ಬೈಬಲ್ ನೆನಪಿಗೆ ಬಂತು: ''ಸೈತಾನ ಹಿಂದಿರುಗು'' ಎಂದುಕೊಂಡಿತು.

ಆ ಪಾಪದ ಯೋಚನೆಯನ್ನು ಹೊರದೂಡಿ ಮತ್ತೆ ಶಾನುಭೋಗರ ಮುಂಭಾಗಕ್ಕೆ ನೆಗೆಯಿತು. ಕತ್ತೆತ್ತಿದರೆ ಶಾನುಭೋಗರು ಮತ್ತೆ ತಿರುಗಿದ್ದಾರೆ. ಹುಲಿಗೆ ಅವರ ಬೆನ್ನು ಹೊರತು ಮತ್ತೇನೂ ಕಾಣಲೊಲ್ಲದು. ಪುನಃ ಶಾನುಭೋಗರಿಗೆ ತಿರುಗಲು ಅವಕಾಶ ಕೊಡದಂತೆ ಮತ್ತಷ್ಟು ವೇಗವಾಗಿ ನೆಗೆಯಿತು. ಆದರೆ ಶಾನುಭೋಗರು ತಮ್ಮ ವೇಗವನ್ನು ಅದೇ ಪ್ರಮಾಣದಲ್ಲೇ ಹೆಚ್ಚಿಸಿಕೊಂಡರು - ಲೆಕ್ಕಾಚಾರದ ವಿಷಯ, ಶಾನುಭೋಗರಾದವರಿಗೆ ಹೇಳಿಕೊಡಬೇಕೆ! ಈ ಸ್ಪರ್ಧೆ ಐದಾರು ಸಾರಿ ನಡೆಯುವುದರೊಳಗೆ ಇಬ್ಬರ ವೇಗವೂ ಸಲಸಲಕ್ಕೂ ಹೆಚ್ಚಿತು. ಈಗ ಶಾನುಭೋಗರಿಗೆ ನಡೆಯುವುದು ಸಾಧ್ಯವಿರಲಿಲ್ಲ. ನಿಂತ ಕಡೆಯಲ್ಲೇ ಹುಲಿಯ ವೇಗಕ್ಕೆ ಸರಿಯಾಗಿ ಚಾಚೂ ತಪ್ಪದಂತೆ ತಮ್ಮ ವೇಗವನ್ನೂ ಹೊಂದಿಸಿಕೊಂಡು ಕುಲಾಲಚಕ್ರದಂತೆ ತಿರುಗುತ್ತಿದ್ದರು. ಒಂದು ಕ್ಷಣವಾದರೂ ಹುಲಿಗೆ ಅವರ ಮುಖದರ್ಶನವಾಗಲಿಲ್ಲ. ಆದರೆ ಈ ದೊಂಬರಾಟವನ್ನು ಎಷ್ಟು ಕಾಲ ನಡೆಸಲು ಸಾಧ್ಯ! ಶಾನುಭೋಗರ ತಲೆ

ಸುತ್ತಲಾರಂಭಿಸಿತು. ಇತ್ತ ಹುಲಿಗೆ ಮೈಯೆಲ್ಲಾ ನೋವು. ಶಾನುಭೋಗರ ಹಿಂದೆಯೂ ಮುಂದೆಯೂ - ಆ ಸಂದರ್ಭದಲ್ಲಿ ಹಿಂದೆ ಮುಂದೆ ಎಂಬ ಶಬ್ದಗಳಿಗೆ ಅರ್ಥವೇ ಇರಲಿಲ್ಲ - ಹುಲಿ ಬೀಳುತ್ತಿದ್ದ ಕಡೆ ನೆಲದ ಮಟ್ಟ ಆರಂಗುಲ ಇಳಿಯಿತು. ಶಾನುಭೋಗರಿಗೆ ಭಯವೂ ಸಂಕಟವೂ ಹೆಚ್ಚಿದವು. ಹುಲಿಯೇನೋ ಪಾಪಭೀರು, ನಿಜ. ಆದರೆ ಅವನ್ನು ಬಿಗಿದಿರುವ ಧರ್ಮದ ಪಾಶ ಎಷ್ಟು ಕಾಲ ತಡೆದೀತು? ಈಗಾಗಲೇ ಅದು ಸಡಿಲವಾಗಿರಬೇಕು; ಒಂದೆರಡು ನಿಮಿಷಗಳಲ್ಲಿ ಕಿತ್ತೇ ಹೋಗಬಹುದು. ತಿರುಗುತ್ತಿರುವಾಗಲೇ ಅವರ ಮನಸ್ಸಿನಲ್ಲಿ ಯೋಚನೆಗಳು ಮಿಂಚಿನ ವೇಗದಲ್ಲಿ ಹಾದು ಹೋದವು.

ತಮ್ಮ ಗತಿ ಹೇಗಾಗುವುದೋ! ಅವರಿಗೆ ಜೀವನದ ಬಯಕೆಯೇನೋ ಇದ್ದರೂ ಸಾವಿನ ಹೆದರಿಕೆ ಅಷ್ಟಾಗಿ ಇರಲಿಲ್ಲ. ಜಾತಸ್ಯ ಮರಣಂ ಧ್ರುವಂ. ಸಂಸಾರದ ಯೋಚನೆಯೂ ಇಲ್ಲ. ಬೆಳೆದು ಕೈಗೆ ಬಂದ ಮಗನಿದ್ದಾನೆ. ಮನೆಯ ಯೋಗಕ್ಷೇಮ ನೋಡಿಕೊಳ್ಳುತ್ತಾನೆ. ಹೆಂಡತಿಯ ಯೋಚನೆ ಸ್ವಲ್ಪ ಬಾಧಿಸಿತು. ಅವಳ ಮುಂದಿನ ಜೀವನ ಕಷ್ಟವೆಂದರೂ ಅವಳ ದುಃಖಕ್ಕೆ ಕಾಲ ಶಾಂತಿಯನ್ನೊದಗಿಸುತ್ತದೆ. ಅಂತೂ ಅದನ್ನೆಲ್ಲಾ ಯೋಚಿಸಿ ಫಲವಿಲ್ಲ. ಆದರೆ ಆಗ ದಕ್ಷಿಣಾಯನ; ಸ್ವರ್ಗದ ಬಾಗಿಲು ತೆರೆದಿರುವುದಿಲ್ಲ. ಭೀಷ್ಮಸಂಥವನೇ ದಕ್ಷಿಣಾಯನದಲ್ಲಿ ಸಾಯಲು ಹಿಂಜರಿಯಲಿಲ್ಲವೆ? ಅದೊಂದು ಯೋಚನೆ. ಮತ್ತೊಂದು ಯೋಚನೆ - ಅದೇ ವಿಚಿತ್ರವರ್ತನೆಯೋ ಮಾನವನ ಮನಸ್ಸಿನದು!- ಆ ವಿಪತ್ತಿನ ಸನ್ನಿವೇಶದಲ್ಲಿ ಅವರಿಗೆ ತಮ್ಮ ಖಿರ್ದಿ ಪುಸ್ತಕದ ಯೋಚನೆ ಬರಬೇಕೆ? ಸಾಮಾನ್ಯ ಸಂದರ್ಭಗಳಲ್ಲಿ ಶಾನುಭೋಗರಾದವರು ಖಿರ್ದಿ ಪುಸ್ತಕಕ್ಕೆ ಪ್ರಥಮಸ್ಥಾನ ಕೊಡುವುದೇನೂ ಆಶ್ಚರ್ಯವಲ್ಲ. ವಂಶ ಪಾರಂಪರ್ಯವಾಗಿ ಬಂದದ್ದು - ತಮ್ಮ ತಂದೆಯಿಂದ ತಾವು ಪಡೆದದ್ದು; ತಮ್ಮಿಂದ ಮಗನ ವಶಕ್ಕೆ ಹೋಗಬೇಕಾದ್ದು; ರಾಷ್ಟ್ರದ ಸ್ವತ್ತು. ಅದನ್ನು ರಕ್ಷಿಸಬೇಕಾದ್ದು ಆದ್ಯ ಕರ್ತವ್ಯ. ಆದರೆ ಆ ಸಾಯುವ ಕಾಲದಲ್ಲೂ ಅವರ ಮನಸ್ಸನ್ನು ''ಹುಲಿ ಖಿರ್ದಿ ಪುಸ್ತಕವನ್ನು ತಿನ್ನುತ್ತದೆಯೇ'' ಎಂಬ ಪ್ರಶ್ನೆ ಬಾಧಿಸಿತು. ಖಿರ್ದಿ ಪುಸ್ತಕದ ವಿಷಯದಲ್ಲಿ ಅದು ಅರೋಚಿಯೆಂದು ದೃಢವಾಗುವುದಾದರೆ! ಹಿಂದೆ ಹುಲಿ ತಿಂದಿದ್ದ ಶಾನುಭೋಗರು ಯಾರೂ ಆ ವಿಷಯದಲ್ಲಿ ಸಾಕ್ಷಿ ನುಡಿಯುವಂತಿಲ್ಲವಷ್ಟೆ.

ಶಾನುಭೋಗರ ಮನಸ್ಸನ್ನು ನಿರಾಶೆ ಕವಿಯುತ್ತಾ ಬಂತು. ಸಾಯುವುದಂತೂ ತಪ್ಪದು. ಅದಕ್ಕೆ ಮೊದಲು ಈ ನಿಲುವಿಲ್ಲದ ಪರಿಭ್ರಮಣದ ಸಂಕಟವನ್ನೇಕೆ ಅನುಭವಿಸಬೇಕು? ಹುಲಿಯ ಪಂಜದಿಂದ ಒಂದೇಟು ಬಿದ್ದರೆ ಸಾಕು - ಮುಂದೆ ಯಾವುದರ ಅರಿವೂ ಉಳಿಯುವುದಿಲ್ಲ. ನೋವೇನಿದ್ದರೂ ಒಂದೇ ಒಂದು ಕ್ಷಣದ ಮಾತು. ಮುಂದಿನ ಕ್ಷಣದಲ್ಲಿ ಈ ಮರ್ತ್ಯಲೋಕದ ಸಂಕಟವನ್ನೆಲ್ಲಾ ಮರೆತು ಸ್ವರ್ಗದಲ್ಲಿ ವಿಹರಿಸಬಹುದು. ಹೀಗೆಂದುಕೊಂಡು ಇನ್ನೇನು ಹುಲಿಗೆ ಮುಖ ಕೊಟ್ಟು ನಿಲ್ಲಬೇಕು, ಅಷ್ಟರಲ್ಲಿ ಭಗವದ್ಗೀತೆಯ ವಾಕ್ಯವೊಂದು ನೆನಪಿಗೆ ಬಂತು: ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ! ಕ್ಷತ್ರಿಯನಿಗೆ ಹೇಳಿದ ಮಾತು, ನಿಜ. ಆದರೆ ನಮ್ಮಲ್ಲಿ ಕ್ಷಾತ್ರ

ಮತ್ತು ಬ್ರಾಹ್ಮಣ ಧರ್ಮಗಳು ಅದಲು ಬದಲಾಗುವುದು ಹಿಂದಿನಿಂದಲೂ ಉಂಟಷ್ಟೆ. ದ್ರೋಣಾಚಾರ್ಯರು ಧನುಸ್ಸನ್ನು ಹಿಡಿದರು; ವಿಶ್ವಾಮಿತ್ರರು ಬ್ರಹ್ಮರ್ಷಿಯಾದರು. ಇದನ್ನೆಲ್ಲಾ ನೆನೆದುಕೊಂಡು ಶಾನುಭೋಗರು "ಮಡಿಯಬೇಕಾದರೆ ಮಾಡಿಯೇ ಮಡಿಯುತ್ತೇನೆ" ಎಂದು ನಿಶ್ಚಯಿಸಿದರು. ಆದರೆ ಮಾಡುವುದಾದರೂ ಏನನ್ನು? ಅವರಲ್ಲಿ ಆಯುಧವಿರಲಿಲ್ಲ. ಖಿರ್ದಿ ಪುಸ್ತಕ ಶಾನುಭೋಗರ ಬ್ರಹ್ಮಾಸ್ತ್ರ, ಅದನ್ನೇ ಉಪಯೋಗಿಸಬೇಕು. ಏನು ಮಾಡುವುದು, ಸರ್ವನಾಶೇ ಸಮುತ್ಪನ್ನೇ... ಆದರೆ ಅದು ಹುಲಿಯ ಮೇಲೇನು ಫಲಿಸೀತು! ಅದನ್ನು ಪ್ರಯೋಗಿಸಿದ್ದರಿಂದ ಹುಲಿ ಸಾಯುವುದಂತಿರಲಿ, ಅದರ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ. ಆದರೂ ಕ್ಷಣಕಾಲ ಹುಲಿ ಅಪ್ರತಿಭವಾದರೆ, ಅದರ ಗಮನ ಸ್ವಲ್ಪ ಸಡಿಲಿಸಿದರೆ, ಅಷ್ಟರಲ್ಲಿ ಸಮೀಪದ ಮರಕ್ಕೆ ಹಾರಿ ಮೇಲಕ್ಕೇರಬಹುದೆಂಬ ಹುಚ್ಚು ಆಸೆ. ಅಂತೂ ಮನುಷ್ಯ ಪ್ರಯತ್ನದಲ್ಲಿರುವುದನ್ನೆಲ್ಲಾ ಮಾಡಿಬಿಡಬೇಕು, ಅದರ ಮೇಲೆ - ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ!

ಇತ್ತ ಹುಲಿಗೂ ವಿಪರೀತವಾದ ಆಯಾಸ. ಶಾನುಭೋಗರು ನಿಂತ ಕಡೆ ತಿರುಗುತ್ತಿದ್ದರು. ಹುಲಿಯಾದರೋ ಪ್ರತಿಸಾರಿಯೂ ಅತ್ತಲಿಂದಿತ್ತ ಇತ್ತಲಿಂದತ್ತ ನೆಗೆಯಬೇಕಾಗಿತ್ತು. ಅದರ ಮೂಳೆಗಳೆಲ್ಲಾ ಕಳಚಿಕೊಂಡು ಬೀಳುವುವೋ ಎನ್ನುವಂತಾಗಿತ್ತು. ಮೊದಲು ಹತ್ತಿಪ್ಪತ್ತು ಸಾರಿಯಾದ ಮೇಲೆ ನೆಗೆಯುವುದಂತೂ ಕೇವಲ ಯಾಂತ್ರಿಕ ಕ್ರಿಯೆಯಾಗಿ ಪರಿಣಮಿಸಿತ್ತು. ನಾನು ಏತಕ್ಕೆ ಹಾರುತ್ತಿದ್ದೇನೆಂಬುದೇ ಮರೆತುಹೋಗಿದ್ದಿರಬಹುದು. ಖಿರ್ದಿ ಪುಸ್ತಕ ಅದರ ಮುಖಕ್ಕೆ ಬಂದು ಬಡಿದಾಗ ಹುಲಿಗೆ ಪೆಟ್ಟೇನೂ ಆಗಲಿಲ್ಲ, ಆಶ್ಚರ್ಯವಾಯಿತು. ಬಳಲಿಕೆಯಿಂದ ಜಡವಾಗಿದ್ದ ಮನಸ್ಸಿಗೆ ಪರಿಸ್ಥಿತಿಯ ಅರಿವಾಗಲು ಅರೆನಿಮಿಷ ಹಿಡಿಯಿತು. ಆ 'ಅರೆ ನಿಮಿಷದಲ್ಲಿ ಶಾನುಭೋಗರು "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು" ಎನ್ನುತ್ತಾ ಒಂದೇ ಉಸಿರಿನಲ್ಲಿ ಮರದ ಕಡೆಗೆ ಧಾವಿಸಿದರು. ಆದರೆ ದೇವರ ರಕ್ಷಣಾ ವ್ಯವಸ್ಥೆ ಬೇರೆ ಇತ್ತು. ಮರಕ್ಕೆ ಕೆಲವು ಅಡಿ ದೂರದಲ್ಲಿ ನೆಲದಿಂದ ಮೇಲೆದ್ದುಕೊಂಡಿದ್ದ ಕಲ್ಲನ್ನು ಎಡವಿ ಶಾನುಭೋಗರು ಬಿದ್ದರು. ಮೊದಲೇ ದಣಿವಾಗಿತ್ತು. ಬಿದ್ದ ಪೆಟ್ಟಿಗೆ ಪ್ರಜ್ಞೆ ತಪ್ಪಿತು.

ಕೆಲವು ನಿಮಿಷಗಳಾದ ಮೇಲೆ ಮೂರ್ಛೆ ತಿಳಿಯಿತು. ಆದರೂ ಆಗ ಅವರಲ್ಲಿ ಯಾವುದೊಂದು ಇಂದ್ರಿಯವೂ ಚುರುಕಾಗಿ ಕೆಲಸ ಮಾಡುತ್ತಿರಲಿಲ್ಲ, ಮನಸ್ಸು ಅಸ್ಪಷ್ಟ ಸ್ಥಿತಿಯಲ್ಲಿತ್ತು; ಕಣ್ಣೊ ಮಂಜು ಮಂಜು. ತಲೆಯೆತ್ತಿ ಸುತ್ತಲೂ ನೋಡುವಷ್ಟು ಚೈತನ್ಯವಿರಲಿಲ್ಲ. ಮಲಗಿದ್ದ ಹಾಗೆಯೇ ಕಡೆಗಣ್ಣು ಹೊರಳಿಸಿ ನೋಡಿದರೆ, ಸಮೀಪದಲ್ಲಿ ಚಿಂತಾಮಗ್ನವಾಗಿದ್ದ ಹುಲಿಯೊಂದು ಕುಳಿತಿದೆ: ಕತ್ತಲುಗಟ್ಟಿದ್ದ ಅವರ ಮನಸ್ಸಿಗೆ ಇದು ವಿಚಿತ್ರವಾಗಿ ಕಂಡು ಸ್ವಲ್ಪ ನಕ್ಕರು - ಆ ಹುಲಿಯ ಮುಖದ ಮೇಲೆ ತೇಲುತ್ತಿದ್ದ ಪೆಪ್ಪ ಕಳೆ ಶುದ್ಧ ಹಾಸ್ಯಾಸ್ಪದವಾಗಿ ತೋರಿತು.... ಮತ್ತೆ ಅವರ ಕಣ್ಣು ಆಯಾಸದಿಂದ ತಾನಾಗಿಯೇ ಮುಚ್ಚಿಕೊಂಡಿತು. ಅದೇನೋ ಸದ್ದು - ಘಂಟೆಯ ಸದ್ದೆ? ಹುಲಿ ಘಂಟೆ ಬಾರಿಸುತ್ತಿದೆ...

ಅಲ್ಲಿ, ದೇವರ ಪೂಜೆ. ಆಗಮಾರ್ಥಂತು ದೇವಾನಾಂ... ನೈವೇದ್ಯಕ್ಕೇನೂ ಇಲ್ಲವೆ... ಶಾನುಭೋಗರ ಅಸಂಬದ್ಧ ಯೋಚನೆಗಳು ಅಲ್ಲಿಗೇ ನಿಂತವು. ಹುಲಿಯ ಉಸಿರಿನ ಅಸಹ್ಯ ವಾಸನೆಯಿಂದಲೋ ಏನೋ, ಅವರು ಮತ್ತೆ ಮೂರ್ಛೆ ಹೋದರು. ಎಷ್ಟು ಹೊತ್ತು ಆ ಸ್ಥಿತಿಯಲ್ಲಿದ್ದರೋ ಅವರಿಗಂತೂ ತಿಳಿಯದು. ಎಚ್ಚೆತ್ತಾಗ ಅವರ ಬಳಿಯಲ್ಲಿ ನಾಲ್ಕೈದು ಜನ ನಿಂತಿದ್ದರು. ತಮ್ಮ ಮುಖವೆಲ್ಲಾ ಒದ್ದೆಯಾಗಿತ್ತು; ಇನ್ನೂ ಯಾರೋ ನೀರು ಚಿಮುಕಿಸುತ್ತಲೇ ಇದ್ದರು.

ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದದ್ದು ಇಷ್ಟು: ಚಿಕ್ಕನಾಯಕನ ಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ಕೆಲವರು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರದಾರಿಯಿದೆ ಎನ್ನುವಾಗ ಎತ್ತುಗಳು ಏನು ಮಾಡಿದರೂ ಮುಂದೆ ಹೋಗದೆ ಕಣಿ ಹಾಕಿಕೊಂಡವು. ಅಷ್ಟೇ ವೇಳೆಗೆ ಎದೆ ನಡುಗುವಂತೆ ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಘಂಟೆಯ ಶಬ್ದವನ್ನು ಕೇಳಿದ ಹುಲಿ ಕೆಲವು ನಿಮಿಷ ತಡೆದು ನೋಡಿತು. ಆದರೆ ರೈತರ ಮಾತು ಕೇಳಿಬಂದ ಮೇಲೆ ನಿರಾಶೆಯಿಂದಲೂ ಕೋಪದಿಂದಲೂ ಗರ್ಜಿಸಿ ಪಲಾಯನ ಮಾಡಿತು. ಗಾಡಿಯವರು ಐದು ಜನವಿದ್ದರೂ ಎಷ್ಟೇ ಆಗಲಿ ಹುಲಿಯೆಂದರೆ ಭಯವಲ್ಲವೆ! ಸ್ವಲ್ಪ ಹೊತ್ತು ಗಾಡಿಯ ಬಳಿಯಲ್ಲೇ ನಿಂತು ನೋಡಿದರು. ಮತ್ತೆ ಗರ್ಜನೆ ಕೇಳಲಿಲ್ಲ. ಅನಂತರ ಅವರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಮುಂದುವರಿದರು. ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.


ಮೊದಲೇ ಹೇಳಿದಂತೆ ಶಾನುಭೋಗರು ಗಟ್ಟಿ ಮನಸ್ಸಿನವರು. ಬೇಗ ಚೇತರಿಸಿಕೊಂಡೆದ್ದು ನಡೆದ ಸಂಗತಿಯನ್ನೆಲ್ಲಾ ನೆನಪಿಗೆ ತಂದುಕೊಂಡರು. ಮೈಕೈ ಸ್ವಲ್ಪ ನಡುಗುತ್ತಿತ್ತೇ ಹೊರತು ಅವರಿಗೆ ಮೈಯಲ್ಲಿ ಗಾಯವೇನೂ ಆಗಿರಲಿಲ್ಲ. ಹುಲಿಯ ಭಯವೇನೋ ಕಳೆದಿತ್ತು; ಖಿರ್ದಿ ಪುಸ್ತಕವನ್ನೂ ಮತ್ತೆ ಪಡೆದು ಭದ್ರಮಾಡಿಕೊಂಡದ್ದಾಯಿತು. ಆದರೆ ಅವರ ಮನಸ್ಸನ್ನೆಲ್ಲಾ ವಿಸ್ಮಯ ಆವರಿಸಿತ್ತು. ತಾವು ಉಳಿದದ್ದು ಹೇಗೆ? ನಿಸ್ಸಹಾಯರಾಗಿ ಪ್ರಜ್ಞೆಯಿಲ್ಲದೆ ಬಿದ್ದಿದ್ದಾಗ ಹುಲಿ ತಮ್ಮನ್ನು ಕೊಂದು ಎಳೆದುಕೊಂಡು ಹೋಗಲಿಲ್ಲವೇಕೆ? ಸ್ವಲ್ಪ ಹೊತ್ತು ಯೋಚಿಸಿ ಗಾಡಿಯವರನ್ನು ಕೇಳಿದರು. "ನಾನು ಮುಖ ಮೇಲಾಗಿ ಬಿದ್ದಿದ್ದೆನೆ?" ಎಂದು. ಇಲ್ಲ ಅವರು ಬಿದ್ದಿದ್ದದ್ದು ಬೆನ್ನು ಮೇಲಾಗಿ. ಶಾನುಭೋಗರ ಸಮಸ್ಯೆಗೆ ಉತ್ತರ ದೊರೆತಂತಾಯಿತು. ಅವರು ಎಡವಿ ಬಿದ್ದಾಗಲೂ ಹುಲಿಗೆ ಪರಾಙ್ಮುಖರಾಗಿಯೇ ಬಿದ್ದರು. ಆದುದರಿಂದಲೇ ಹುಲಿ ಅವರನ್ನು ಕೊಲ್ಲಲಾರದೆ ಹೋಯಿತು. ಕೊನೆಯವರೆಗೂ ಆ ಪ್ರಾಣಿ ತನ್ನ ಕುಲಧರ್ಮವನ್ನು ಪಾಲಿಸಿಕೊಂಡೇ ಬಂದಿತ್ತು! ಉದಾರ ಹೃದಯರಾದ ಶಾನುಭೋಗರ ಬಾಯಿಂದ 'ಭಲೆ' ಎಂಬ ಮೆಚ್ಚಿಕೆಯ ಮಾತು ಹೊರಟಿತು. ಸಂದರ್ಭವನ್ನರಿಯದೆ, "ಈ ಹಾರುವಯ್ಯನಿಗೆ

ಹುಚ್ಚು ಹಿಡಿಯಿತೋ'' ಎನ್ನುವಂತೆ ನೋಡುತ್ತಿದ್ದ ಗಾಡಿಯವರಿಗೆ ಅಂದಿನ ಕಥೆಯನ್ನೆಲ್ಲಾ ಹೇಳಿದರು.

ಶಾನುಭೋಗರು ''ಕುಡಿದ ನೀರು ಅಲುಗದ ಹಾಗೆ'' ಎನ್ನಲಾಗದಿದ್ದರೂ ಜೀವಸಹಿತ ಮನೆ ಸೇರಿಕೊಂಡರು. ರಸದೂಟವನ್ನು ಮಾಡಿದರು. ''ಹುಲಿ ಈಗ ಎಷ್ಟು ಹಸಿದಿರಬೇಕು'' ಎಂಬ ಯೋಚನೆ ಬಂದಾಗ ಅವರ ವದನಾರವಿಂದದಲ್ಲಿ ಮುಗುಳುನಗೆ ಮೂಡಿತು; ಊಟದ ರುಚಿ ಇಮ್ಮಡಿಯಾಯಿತು. ಅವರಿಗೆ ಅರೆ ನಿಮಿಷದ ಅವಕಾಶವನ್ನು ಒದಗಿಸಿಕೊಟ್ಟು ಪ್ರಾಣವನ್ನು ಕಾಪಾಡಿದ ಆ ಖಿರ್ದಿ ಪುಸ್ತಕ ಎಂದಿನಂತೆ ತನ್ನ ಜೀರ್ಣ ವಸ್ತ್ರದ ಹೊದಿಕೆಯಲ್ಲಿ ತೊಲೆಯ ಮೇಲೆ ವಿಶ್ರಾಂತಿ ಪಡೆಯುತ್ತಿತ್ತು. ಶಾನುಭೋಗರ ದೃಷ್ಟಿಯು ಅನಂತ ವಾತ್ಸಲ್ಯದಿಂದ, ಕೃತಜ್ಞತೆಯಿಂದ, ಆ ಕಡೆಗೆ ಹೊರಳಿತು.

ಆ ಶಾನುಭೋಗರಂಗೂ ಈಗ ಇಲ್ಲ. ಆದರೆ ಖಿರ್ದಿ ಪುಸ್ತಕ ಇಂದಿಗೂ ಭದ್ರವಾಗಿದೆ. ದೇವರ ಮಂದಾಸನದ ಮೇಲೆ ಮಂಡಿಸಿ ಶಾನುಭೋಗರ ಸಂತತಿಯವರಿಂದ ಈಗಲೂ ಪೂಜೆಯನ್ನು ಕೈಗೊಳ್ಳುತ್ತಿದೆ. ಅವರೆಲ್ಲರ ಕೃತಜ್ಞತೆಯೂ ಅದಕ್ಕೆ ಸಂದಿದೆ. ಆದರೆ ನಿಜವಾಗಿ ನೋಡಿದರೆ ಶಾನುಭೋಗರು ಉಳಿದದ್ದು ಖಿರ್ದಿ ಪುಸ್ತಕದಿಂದಲ್ಲ, ಹುಲಿಯ ಧರ್ಮಶ್ರದ್ಧೆಯಿಂದ. ಆ ಗುಣವನ್ನು ಹಾಡಿ ಹೊಗಳುವ ಭಾಗ್ಯ ನನ್ನ ಪಾಲಿಗೆ ಬಂದಿದೆ.

★★★



ಇನ್ಸ್‌ಪೆಕ್ಟರ್ ಗಧಾ

(ಕೆ.ವಿ. ಐಯ್ಯರ್ ಅವರ "ಸಮುದ್ಯತಾ" ಸಂಕಲನದಿಂದ)
ಮೂರನೆಯ ಕಂತು.

ನೀನು ನಗತೀಯೋ ಏನೋ... ವರದಪ್ಪ... ಬರದೆ ಪುಂಡು ಅರ್ಜೀನ. ಆಗ ರಾತ್ರಿ ಎಂಟು ಗಂಟೆ ಸಮಯ. ಅದನ್ನ ತೆಗೆದುಕೊಂಡು ಹೋದೆ, ಸೆಟ್ಟಗೆ ಇನ್ಸ್‌ಪೆಕ್ಟರ್ ಮನೆಗೆ. ನನ್ನ ಅದೃಷ್ಟಕ್ಕೆ ಈಗ ಇನ್ಸ್‌ಪೆಕ್ಟರು ಮನೆಯಲ್ಲೇ ಇದ್ದರು. ಮನೆಯ ಗೇಟಿನಲ್ಲಿ ಪ್ಯಾದೆಯೊಬ್ಬ... ಸೆಂಟ್ರಿ ಡ್ಯೂಟಿಯಲ್ಲಿದ್ದ. ಹೇಳಿ ಕಳಿಸಿದೆ ಅವನ ಅತ್ರ. ಅವನು ಗೇಟಿನ ಒಳಗಡೆ ಚಿಲಕ ಹಾಕಿಕೊಂಡು ಮನೆಯೊಳಕ್ಕೆ ಹೋಗಿ ಇನ್ಸ್‌ಪೆಕ್ಟರನ್ನು ಕಂಡು ಬಂದು ನನಗೆ ತಿಳಿಸಿದ: ಯಾವ ವಿಷಯವಿದ್ದರೂ ನಾಳೆ ಆಫೀಸಿಗೆ ಬಂದು ತಿಳಿಸಬಹುದಂತೆ ಅಂತ. ನಾನು ಮತ್ತೆ ಹೇಳಿ ಕಳಿಸಿದೆ: 'ಬಲು ಅರ್ಜೆಂಟು ವಿಷಯ' ಎಂದು ತಿಳಿಸು. 'ಮೂರು ನಿಮಿಷಗಳಿಗಿಂತ ಹೆಚ್ಚಾಗಿ ಅವರ ಸಮಯವನ್ನು ಉಪಯೋಗಿಸಿಕೊಳ್ಳುವುದಿಲ್ಲ' ಅಂತ ಮಾಮೂಲು ರೀತಿಯಲ್ಲಿ ತಿಳಿಸಿದೆ. ಇನ್ಸ್‌ಪೆಕ್ಟರು ಬರಮಾಡಿಕೊಂಡರು.

ನನ್ನೂ, ಗೌರವ ತರೋ ನನ್ನ ಖಾದಿ ಟೋಪೀನೂ ಕಂಡು, 'ಬನ್ನಿ ಒಳಕ್ಕೆ' ಅಂತ ಕರೆದು ಹತ್ತಿರದಲ್ಲೂ ಅಲ್ಲದ... ದೂರದಲ್ಲೂ ಅಲ್ಲದ, ಒಂದು ಕುರ್ಚಿಯನ್ನು ತೋರಿಸಿ 'ಕೂತುಕೊಳ್ಳಿ' ಎಂದರು. 'ನಮಸ್ಕಾರ... ಇಷ್ಟು ಹೊತ್ತಿನಲ್ಲಿ ತಮಗೆ ತೊಂದರೆ ಕೊಡುತ್ತಿದ್ದೇನಲ್ಲ ಅಂತ ಸಂಕೋಚವಾಗುತ್ತಿದೆ. ವಿಧಿ ಇಲ್ಲದೆ ಬಂದಿದ್ದೇನೆ. ಪರಾಮರಿಸಬೇಕು' ಎನ್ನುತ್ತ ಕೈಲಿ ತಂದಿದ್ದ ಅರ್ಜಿಯನ್ನು ಅವರ ಕೈಗೆ ಕೊಟ್ಟೆ. ಅವರು ಅದನ್ನು ಎಲೆಕ್ಟ್ರಿಕ್ ಟೇಬಲ್ ಲ್ಯಾಂಪ್ ಬೆಳಕಿನಲ್ಲಿ ಓದುವುದಕ್ಕೆ ತೊಡಗಿದಾಗ, ನಾನು ಕುರ್ಚಿಯಲ್ಲಿ ಕುಳಿತು, ಕಣ್ಣುಗಳನ್ನು ಸುತ್ತಮುತ್ತ ಓಡಿಸಿದೆ.

ಇನ್ಸ್‌ಪೆಕ್ಟರು ಕೂತಿದ್ದ ಬಳಿಯೇ ಅವರ ಮೇಜೂ ಆಚೆಗೆ ಇನ್ನೊಂದು ಕುರ್ಚಿಯೂ ಇದ್ದುವು. ಅವರು ಈಗ ಕುಳಿತಿದ್ದ ಸ್ಥಳ ಒಂದು ಕೋಣೆಯಲ್ಲ, ಮನೆಯ ಪಡಸಾಲೆ ಅದು. ಅಲ್ಲಿಯೆ ಒಂದು ಕಡೆಗೆ ಮಲಗುವ ದೊಡ್ಡ ಮಂಚ, ಒಂದೆರಡು ಸಣ್ಣ ಪುಟ್ಟ ಸಾಮಾನು. ಅಲ್ಲಿಯೇ ಗೋಡೆಗೆ ಬಿಗಿದಿದ್ದ ಬಟ್ಟೆಸ್ಟ್ಯಾಂಡು. ಅದರ ಪಕ್ಕದಲ್ಲಿಯೆ... ವರದಪ್ಪ... ನನಗೆ ಬೇಕಾಗಿದ್ದ ಲಾಯದ ಬೀಗದಕ್ಕೆ ಒಂದು ಕಬ್ಬಿಣದ ಮೊಳೆಗೆ ನೇತಾಡುತ್ತ ಕಣ್ಣೆದುರಿಗೇ ಇತ್ತು. ಅದು ನನ್ನ ಕೈಗೆ ಸಿಗುವುದು ಅಸಾಧ್ಯವೆಂದೇ ನನಗೆ ಕಂಡಿತು.

ನನ್ನ ಬೆನ್ನು ಕಡೆಗೆ ಇದ್ದ ಬಾಗಿಲ ಹೊರಗೆ ಪ್ಯಾದೆಯೊಬ್ಬ ತುಂಬಿದ್ದ ಕೋವಿಯೊಡನೆ ಕಂಡೂ ಕಾಣಿಸದಂತೆ ನಿಂತಿದ್ದ.

ಇನ್ಸ್‌ಪೆಕ್ಟರು, ನಾನು ಆಚೆ ಈಚೆ ನೋಡುತ್ತಿದ್ದಾಗ, ತಾವು ಓದುತ್ತಿದ್ದ ಪುಂಡರ್ಜಿಯ ಮೇಲ್ಕೊನೆಯಿಂದ ನನ್ನನ್ನು ನೋಡಿದರೋ ಏನೊ! ಆ ಹುದ್ದೆಯವರು ಜನಗಳನ್ನು ಪರೀಕ್ಷಿಸುವುದೇ ಹಾಗೆ. ನಮ್ಮ ಮನಸ್ಸು, ಕಣ್ಣುಗಳು ಇನ್ನೊಂದು ಕಡೆ ನೆಟ್ಟಿರುವಾಗ, ಅವರ ವಕ್ರದೃಷ್ಟಿ ನಮ್ಮ ಮುಖ ಭಾವಗಳನ್ನು ಪರೀಕ್ಷೆ ಮಾಡಿ ಅಳತೆ ಮಾಡಿಕೊಳ್ಳುತ್ತದೆ. ಹಾಗೆ

ಅವರು ನನ್ನನ್ನು ನೋಡಿದರೋ ಇಲ್ಲವೋ... ನೋಡಿದರೆಂದೇ ನನ್ನ ಎಣಿಕೆ. ಅರ್ಜಿಯನ್ನು ಓದಿ ನೋಡಿ ಕೇಳಿದರು.

''ತಾವು ಯಾರು?''

''ನಾನು ಕಲ್ಲೇಗೌಡರ ಮಗ.''

''ಯಾರು? ಪ್ಲಾಂಟರ್ ಕಲ್ಲೇಗೌಡರ ಮಕ್ಕಳೇನು?''

''ಹೌದು. ಅವರು ಈಗ ಮೂರು ತಿಂಗಳಿಂದಲೂ ಪ್ಲಾಂಟೇಷನ್ನಿನಲ್ಲೇ ಇರುತ್ತಾರೆ.''

ಇನ್ಸ್‌ಪೆಕ್ಟರ್: ''ಹಾಗೆಂದು ಕೇಳಿಬಲ್ಲೆ. ಆಗಾಗ್ಗೆ ಪ್ಲಾಂಟೇಷನ್ನಿಗೆ ಹೋಗಿ ಬರುತ್ತಿರುತ್ತಾರಂತೆ, ಹೆಚ್ಚಾಗಿ ಪ್ಲಾಂಟೇಷನ್ನಿನಲ್ಲೆ ಇರುತ್ತಾರಂತೆ.... ಮಲ್ಲೇಗೌಡರೆ, ನನಗೆ ತಮ್ಮ ಪರಿಚಯವಾದುದು ಬಹು ಸಂತೋಷ. ತಮ್ಮ ತಂದೆಗಳು ಊರಿಗೆ ಬಂದಾಗ ನಮಗೆ ಪರಿಚಯ ಮಾಡಿಸಿಕೊಡಿ. ಊರಿನ ಹಿರಿಯರ ಸ್ನೇಹ ಸೌಹಾರ್ದಗಳು ನಮಗೆ ತುಂಬ ಆವಶ್ಯಕ. ತಮ್ಮ ಮನೆಯ ಅಕ್ಕಪಕ್ಕದವರೆಂದು ನಮೂದಿಸಿದ್ದೀರಿ. ಅವರ ಹೆಸರುಗಳನ್ನು ಅರ್ಜಿಯಲ್ಲಿ ತಿಳಿಸಿಲ್ಲ. ಅವರುಗಳು ಯಾರ‍್ಯಾರು? ಏನೇನು ಕಸುಬುಗಳಲ್ಲಿದ್ದಾರೆ?''

ನಾನು ನಾಲ್ಕಾರು ಸುಳ್ಳು ಹೆಸರುಗಳನ್ನು ಬೊಂಕಿದೆ - 'ಸಂಜೆ ಆಗೋದೆ ತಡ, ಸ್ವಾಮಿ, ತುಂಬ ಕುಡಿದ್ಬಿಟ್ಟಿರ‍್ತಾರೆ. ಜಗಳ ಕೂಗು ಬಡಿದಾಟ ರಂಪ ತಡೆಯೋಕ್ಕಾಗೊದಿಲ್ಲ. ಈಗ ಸ್ವಲ್ಪ ಹೊತ್ತಿಗೆ ಮುಂಚೆ, ನಮ್ಮ ಮನೆ ಬಾಗಿಲ್ಮೇಲೇ ಈ ಸೀಸೇನ ತಂದು ಒಡೆದಿದ್ದಾರೆ' ಎನ್ನುತ್ತ ಒಡೆದ 'ಅಮೃತಾರಿಷ್ಟ'ದ ಬಾಟಲಿನ ಚೂರೊಂದನ್ನು ಅವರ ಕೈಗೆ ಕೊಟ್ಟೆ. ಅವರು ಅದನ್ನು ನೋಡಿ ಮೇಜಿನ ಮೇಲಿಟ್ಟುಕೊಂಡರು. 'ಇದೇ ತೆರನ ಒಡೆಯದಿರುವ ಬಾಟಲುಗಳೂ ಈ ಊರಿನಲ್ಲಿ ನನ್ನ ಕೈಗೆ ಸಿಕ್ಕಿವೆ' ಅಂತ ತಮ್ಮ ಮೇಜಿನ ಡ್ರಾಯರನ್ನು ಎಳೆದು, ಅದರಲ್ಲಿಟ್ಟಿದ ಎರಡು ಖಾಲಿ ಅಮೃತಾರಿಷ್ಟದ ಬಾಟಲುಗಳನ್ನು ಎತ್ತಿ ನನ್ನ ಕೈಲಿಟ್ಟರು.

ವರದಪ್ಪ... ಅವರು ಆ ಬಾಟಲುಗಳನ್ನು ನನ್ನ ಕೈಯಲ್ಲಿಟ್ಟಾಗ, ನನ್ನ ಕೈಗಳು ನಡುಗಿದುವು. ಅದನ್ನು ಇನ್ಸ್‌ಪೆಕ್ಟರ್ ಕಂಡುಕೊಂಡರೆಂದೇ ನನಗೆ ಅನುಮಾನ.

ಇನ್ಸ್‌ಪೆಕ್ಟರ್: ''ಮಲ್ಲೇಗೌಡರೆ, ಈ ನಿಮ್ಮ ನೆರೆಹೊರೆಯವರು ಕಳ್ಳಭಟ್ಟಿ ಇಟ್ಟಿರಬಹುದೆಂದಲ್ಲವೆ ತಮ್ಮ ಅನುಮಾನ? ಒಳ್ಳೆಯದು. ಇದನ್ನು ಪತ್ತೆ ಮಾಡಬೇಕಾದರೆ, ನನಗೆ ತಮ್ಮ ಸಹಾಯ ಬೇಕಾಗುತ್ತೆ. ತಾವು ದೊಡ್ಡ ಮನಸ್ಸಿನಿಂದ ನಮ್ಮೊಡನೆ ಸಹಕರಿಸಬೇಕು. ಸಹಕಾರದಿಂದ ತಮಗೆ ಸರಿಯಾದ ಗೌರವ, ಪದವಿ ಇವುಗಳು ಖಂಡಿತ ದೊರಕುವುವು. ತಾವು ತಮ್ಮ ನೆರೆಯವರೊಡನೆ ಸ್ನೇಹವನ್ನು ಬೆಳಸಿಕೊಂಡು, ತಾವೂ ಅವರ ಭಟ್ಟಿಯ ವಿಷಯದಲ್ಲಿ ಸಹಕಾರ, ಸಹಾನುಭೂತಿ, ಒತ್ತಾಸೆ ಕೊಡುವಂತೆ ನಟಿಸಿ, ನಮಗೆ ಸಮಾಚಾರಗಳನ್ನು ಕೊಡಿ. ನಾಳೆಯಿಂದಲೇ ಈ ತಮ್ಮ ಅರ್ಜಿಯ ವಿಷಯದಲ್ಲಿ ನಾನು ಮುತುವರ್ಜಿ ವಹಿಸುತ್ತೇನೆ. ತಮ್ಮ ಸಹಕಾರ ನನಗೆ ಇದೆಯಷ್ಟೆ?'

ನಾನು: 'ಅಹ! ಅಗತ್ಯವಾಗಿ, ನನ್ನ ಕೈಯಲ್ಲಾದ ಮಟ್ಟಿಗೆ.'

ಇನ್ಸ್‌ಪೆಕ್ಟರ್: 'ಅಷ್ಟು ಸಾಕು. ಅದಕ್ಕಿಂತ ಹೆಚ್ಚಗೆ ನಮಗೆ ಬೇಕಾಗಿಲ್ಲ.'

'ನಾನು ಬರುತ್ತೇನೆ, ನಮಸ್ಕಾರ' ಎಂದು ಹೇಳಿ, ಮನೆಗೆ ಹೋಗಲು ಎದ್ದೆ. ಇನ್ಸ್‌ಪೆಕ್ಟರು 'ಕುಳಿತುಕೊಳ್ಳಿ ಮಲ್ಲೇಗೌಡರೆ, ನನ್ನ ಜೊತೆಯಲ್ಲಿ ಒಂದಿಷ್ಟು ಕಾಫಿ ತೆಗೆದುಕೊಂಡು ಹೋಗುವಿರಂತೆ' ಎಂದು ಹೇಳಿ, ಮತ್ತೆ ಕೂಗಿ ಹೇಳಿದರು: 'ಮಗು, ಉಷಾ. ಬೇಗ ಎರಡು ಕಪ್ ಕಾಫಿ ಮಾಡಿ ತೆಗೆದುಕೊಂಡು ಬಾ. ನಮ್ಮ ಮನೆಗೆ ಪ್ಲಾಂಟರ್ ಕಲ್ಲೇಗೌಡರ ಮಕ್ಕಳು ಮಲ್ಲೇಗೌಡರು ಬಂದಿದ್ದಾರೆ.'

ಉತ್ತರ: ತಂದೇಪ್ಪ. ಬೇಗನೆ ಕಾಫಿ ಹಾಕಿ ತರ್ತೇನೆ.

ನನ್ನ ಹೃದಯ ಅತಿಯಾಗಿ ಬಡಿದುಕೊಳ್ಳಲಾರಂಭಿಸಿತು. ಇನ್ಸ್‌ಪೆಕ್ಟರು ಹಾಗೇ ಕುಳಿತುಕೊಂಡು, ನನ್ನ ಹೃದಯದ ಭಾವಗಳು ನನ್ನ ಮುಖದಲ್ಲಿ ಪ್ರತಿಬಿಂಬಿಸುತ್ತಿದ್ದುದನ್ನು ವೀಕ್ಷಿಸುತ್ತ ಕುಳಿತಿದ್ದರೆಂದೇ ನನ್ನ ಅನುಮಾನ.

ಆರೆಂಟು ನಿಮಿಷಗಳಲ್ಲಿ ತಯಾರಾದ ಕಾಫಿಯನ್ನು ಬಟ್ಟಲುಗಳಲ್ಲಿ ಒಂದು ತಟ್ಟೆಯಲ್ಲಿಟ್ಟುಕೊಂಡು... ಉಷೆ... ಬಂದಳು. ನಾನು ಮರ್ಯಾದೆಯಿಂದ ಎದ್ದು ನಿಂತೆ, ಇನ್ಸ್‌ಪೆಕ್ಟರು 'ಕೂತುಕೊಳ್ಳಿ ಗೌಡರೆ. ಚಿಕ್ಕವರು ಬಂದರೆ, ದೊಡ್ಡವರು ಎದ್ದು ನಿಲ್ಲುವುದು ನಮ್ಮ ಸಮಾಜಗಳಲ್ಲಿ ಇನ್ನೂ ರೂಢಿಗೆ ಬಂದಿಲ್ಲ... ಮಲ್ಲೇಗೌಡರೆ, ಇವಳು ಉಷಾ - ನನ್ನ ಒಬ್ಬಳೇ ಮಗಳು. ನನ್ನ ಗೃಹಿಣಿ ತೀರಿಕೊಂಡು ಹತ್ತು ವರ್ಷಗಳಾದುವು. ಮನೆಯ ಎಲ್ಲ ಕೆಲಸಗಳನ್ನು ಈಗ ಇವಳೇ ಮಾಡುತ್ತಾಳೆ... ಉಷಾ.... ಹೇಳಿದೆನಲ್ಲವೆ... ಈ ಊರಿನ ಪ್ಲಾಂಟರ್ ಕಲ್ಲೇಗೌಡರ ಮಕ್ಕಳು ಇವರು, ಮಲ್ಲೇಗೌಡರು. ಇವರ ತಂದೆಯವರ ಪರಿಚಯವೂ ಬೇಗನೆ ನಮಗೆ ಆಗುವುದಿದೆ.'

ಇನ್ಸ್‌ಪೆಕ್ಟರು ಪುನಃ ವ್ಯಂಗ್ಯವಾಗಿ ಮಾತನಾಡಿದರೆಂದು ನನಗೆ ಭಾವನೆ. ಉಷೆ... ನನ್ನನ್ನು ಮಂದಹಾಸದಿಂದ ನೋಡಿ 'ನಮಸ್ಕಾರ' ಎಂದಳು. ಅಷ್ಟಕ್ಕೇ ನನಗೆ ಸ್ವರ್ಗ ಏರಿದಷ್ಟು ಆನಂದವಾಯಿತು. ನಾನು ಪ್ರತಿಯಾಗಿ 'ನಮಸ್ಕಾರ' ಎಂದೆ. ಉಷೆ ಕಾಫಿ ತುಂಬಿದ್ದ ಬಟ್ಟಲುಗಳನ್ನು ಟೀಪಾಯ್ ಮೇಲೆ ಅಣಿಯಾಗಿ ಜೋಡಿಸಿಟ್ಟು, ಒಳಕ್ಕೆ ಹೊರಟು ಹೋದಳು.

ನಾವಿಬ್ಬರೂ ಕಾಫಿ ಬಟ್ಟಲುಗಳನ್ನು ಕೈಗೆ ತೆಗೆದುಕೊಂಡೆವು. ಇನ್ಸ್‌ಪೆಕ್ಟರು ತಮ್ಮ ಕಾಫಿಯನ್ನು ನಿಧಾನವಾಗಿ ಕುಡಿಯುತ್ತಿದ್ದರು. ನಾನು ಬೇಗ ಬೇಗನೆ ಕುಡಿಯುತ್ತಿದ್ದುದನ್ನು ನೋಡಿ 'ಆತುರವೇಕೆ ಗೌಡರೆ, ನಿಧಾನವಾಗಿ ಕುಡಿಯಬಹುದಲ್ಲ! ಕಾಫಿ ಪ್ಲಾಂಟರುಗಳಿಗೇ ಕಾಫಿ ಕುಡಿಸುತ್ತಿದ್ದೇನೆ' ಎನ್ನುತ್ತ ಸೂಕ್ಷ್ಮವಾಗಿ ನಕ್ಕರು.

ಪುನಃ ಅವರು ವ್ಯಂಗ್ಯವಾಗಿ ಮಾತನಾಡಿದರೆಂದು ನನಗೆ ಭಾವನೆಯಾಯಿತು. ಕಾಫಿಯನ್ನು ಅವರಂತೆಯೇ ನಿಧಾನವಾಗಿ ಕುಡಿದು ಮುಗಿಸಿ ''ಇನ್ನು ಬರುತ್ತೇನೆ. ತಮಗೆ ಈ ಅವೇಳೆಯಲ್ಲಿ ತೊಂದರೆ ಕೊಟ್ಟೆ. ಕ್ಷಮಿಸಬೇಕು'' ಎಂದು ಹೇಳಿ ಹೊರಡಲು ಎದ್ದೆ. 'ಆ ಮಾತುಗಳನ್ನು ಇನ್ನು ನಾನು ಹೇಳಬೇಕು, ಗೌಡರೆ. ತಮ್ಮಂಥವರಿಂದಲೇ ನಮ್ಮ ಉದ್ಯೋಗ ಮುಂದಕ್ಕೆ ಬರಬೇಕು' ಎಂದರು ಇನ್ಸ್‌ಪೆಕ್ಟರು.

ವರದಪ್ಪ, ನೀನು ಹೇಳು... ಇನ್ಸ್‌ಪೆಕ್ಟರು ಆಡಿದ ಮಾತುಗಳಲ್ಲಿ ವ್ಯಂಗ್ಯ ಇತ್ತಲ್ಲವೆ? ಅಥವಾ ಇವೆಲ್ಲ ಹುಳ್ಳುಹುಳ್ಳಗೆ ಇದ್ದ ನನ್ನದೇ ಮನಸ್ಸಿನ ಭಯಗಳೊ? ಅಂತೂ ಆ ದಿನ ನಡೆದದ್ದು ಒಂದು ಘಟನೆ.. ರಸಘಟನೆ ಎಂದರೂ ತಪ್ಪೇನಿಲ್ಲ. ಒಂದು ದೃಷ್ಟಿಯಿಂದ ನೋಡಿದರೆ, ಸ್ನಾನಕ್ಕೆ ಹೋಗಿ ಕೆಸರು ಬಳಿದುಕೊಂಡು ಬಂದಂತೆ ಆಯಿತು ನನಗೆ.

ಮನೆಯನ್ನು ಸೇರಿ ಊಟ ಮಾಡಿ ಮಲಗಿದೆ... ನಿದ್ದೆ ಬರಲಿಲ್ಲ. ಒಂದು ಕಡೆ ಏನೋ ಗಾಬರಿ, ಏನೋ ಭಯ - ಇನ್ನೊಂದು ಕಡೆ ಉಷೆ ಕಾಫಿ ಕೊಟ್ಟಾಗ 'ನಮಸ್ಕಾರ' ಎಂದು ಹೇಳಿ ನಸುನಕ್ಕ ಮುಖದ ಸಿಹಿ ನೆನಪು - ಅಂತೂ ಆ ರಾತ್ರಿ ನಿದ್ದೆ ಬಂದೂ ಬಾರದ ಹಾಗೆ ಇತ್ತು.

ಮಾರನೇ ದಿನ ಒಂದು ಸಮಾಚಾರ ನನ್ನ ಕಿವಿಗೆ ಬಿತ್ತು. ಆ ದಿನ ಮಧ್ಯಾಹ್ನ ಇನ್ಸ್‌ಪೆಕ್ಟರು ಕುದುರೆ ಹತ್ತಿಕೊಂಡು, ಜೊತೆಗೆ ನಾಲ್ಕು ಪ್ಯಾದೆಗಳನ್ನೂ ಕರೆದುಕೊಂಡು, ಯಕ್ಷರ ಕೋಟೆ ಮೇಲಕ್ಕೇ ಬಂದುಬಿಟ್ಟಿದ್ದರಂತೆ.

'ಈ ಬೆಟ್ಟಗಳಿಗೆ ಯಕ್ಷರ ಕೋಟೆ, ಗಂಧರ್ವರ ಕೋಟೆ, ಗರುಡನ ಬೀಡು, ಎಂಬ ಹೆಸರುಗಳೆಲ್ಲ ಏಕೆ? ಹೇಗೆ ಬಂತು? ಅಲ್ಲಿಯ ಪುರಾಣ, ದಂತ ಕಥೆಗಳು ಏನೇನು? ಅಲ್ಲಿ ಈಗ ಏನಿದೆ?'' ಎಂದೆಲ್ಲಾ ಕೇಳಿದರಂತೆ ಇನ್ಸ್‌ಪೆಕ್ಟರು, ನಮ್ಮ ಊರ ಹಿರಿಯರನ್ನ, ಮುದುಕರನ್ನ... ಅವರೂ ಹೇಳಿದರಂತೆ - 'ಹಿಂದೆ ಅಲ್ಲೆಲ್ಲಾ ಯಕ್ಷರೂ ಗಂಧರ್ವರೂ ಬಂದು ಇರುತ್ತಾ ಇದ್ದರು. ನಮ್ಮೂರಿಂದ ಎಷ್ಟೋ ಹೆಣ್ಣುಮಕ್ಕಳನ್ನ ಹೊತ್ಕೊಂಡ್ಹೋಗಿ ಬಿಟ್ರು. ಈಗಲೂ ನಾವ್ಯಾರೂ ಬೆಟ್ಟದ ಮೇಲಕ್ಕೇ ಹೋಗೋದಿಲ್ಲ. ಆಡು, ಕುರಿ, ದನ ಮೇಯ್ಸೋ ಹುಡುಗ್ರು ಹೇಳ್ತಾರೆ - 'ಈಗಲೂ ಅಲ್ಲಲ್ಲಿ ರಾಕ್ಷಸರ ಹಾಗಿರೋ ಯಕ್ಷರು ಇದ್ದಾರೆ. ಕುರಿ, ಮೇಕೆ, ದನ ಏನಾದ್ರೂ ಕೈಗೆ ಸಿಕ್ಕಿದರೆ, ತಿಂದೇಹಾಕಿಬಿಡುತ್ತಾರೆ' ಅಂತ.

ಇದನ್ನೆಲ್ಲ ಕೇಳಿ ಇನ್ಸ್‌ಪೆಕ್ಟರು ನಕ್ಕರಂತೆ. 'ಹಾಗಾದರೆ ನಾನೇ ಮೇಲಕ್ಕೆ ಹತ್ತಿ ಹೋಗಿ ನೋಡಿ ಬರುತ್ತೇನೆ. ನಿಮ್ಮ ಹೆಣ್ಣುಮಕ್ಕಳು ಅವರ ಬಳಿ ಇದ್ದರೆ, ಯುದ್ಧ ಮಾಡಿ ಬಿಡಿಸಿಕೊಂಡು ಬಂದು ನಿಮ್ಮ ಮನೆಗಳಿಗೆ ಸೇರಿಸುತ್ತೇನೆ' ಎಂದು ಹೇಳಿಯೂ ಹೋದರಂತೆ.

ನಾನು ಆ ರಾತ್ರಿಯೇ ದೊಡ್ಡಯ್ಯನನ್ನು ಕಂಡು ಮಾತನಾಡಿದೆ. ಇನ್ಸ್‌ಪೆಕ್ಟರ ಮನೆಯಲ್ಲಿ ನಡೆದದ್ದನ್ನೆಲ್ಲಾ ಚಾಚೂ ತಪ್ಪದೆ ಹೇಳಿದೆ. ಅವನು ಎಲ್ಲವನ್ನೂ ಕೇಳಿ ನಕ್ಕು ಹೇಳಿದ: 'ಮಲ್ಲಣ್ಣ, ದೇವರುಗಾನ ನನಗೆ ನಿನ್ನ ಮೈಬಣ್ಣ, ನಿನ್ನ ಮೈಮಾಟ, ನಿನ್ನ ವಯಸ್ಸು, ನಿನ್ನ ಚಿಗುರುಮೀಸೆ ಇವುಗಳ್ನ ಕೊಟ್ಟಿದ್ರೆ, ನಿನ್ನವರ್ಗ್ಗೂ ಬಿಡುತ್ತಿದ್ನಾ ಈ ಹೆಣ್ನ! ಮೀಸೆ ಹೊತ್ತಿದ್ದೀಯ... ಹೆಣ್ಣಂಗೆ ಆಡಬೇಡ. ಓಗ್ಲಿ... ಒಂದು ಸಣ್ಣ ಉಪಾಯ ಹೇಳ್ತೇನೆ, ಸರ್ರ್ಯಾಗಿ ಕೇಳು... ನಾಳೆ ಸಣಿವಾರ ಪಟ್ಟಣದಾಗೆ ದೊಡ್ಡ ಸಂತೆ ಸೇರ್ತದೆ. ಊರ ಹಬ್ಬಾನೂ ಅಂದೇ. ಆ ದಿನ ಭಾರಿ ಸಂತೆ ಆಗೋದ್ರಿಂದ ದೊಡ್ಡ ದೊಡ್ಡ ಅಂಗ್ಡಿಗಳೂ ಬರ್ತಾವೆ. ಕಾಟಯ್ಯನ ಜವಳಿ ಗಡಂಗು ಬಂದೇ ಬತ್ತದೆ. ನಿನಗೆ ಚೆನ್ನಾಗಿ ಗೊತ್ತೈತಲ್ಲ ಕಾಟಯ್ಯ... ಈ ಉಡ್ಗೀಗೆ ಬಟ್ಟೆ ಅಂದ್ರೆ, ಬಲು ಷೋಕಿ... ನೋಡಿದ್ರೆ ತಿಳಿಯಾಕಿಲ್ವ? ಕಾಟಯ್ಯನ ಜವಳಿ ಅಂಗ್ಡೀಗೆ ಬಂದೇ ಬತ್ತಾಳೆ. ಆಗ ಎಂಗಾರ ಸ್ನೇಹ ಕುದುರಿಸ್ಕೊಂಡ್ಬಿಡು. ಇನ್ನಿಂತಾ ಸಮಯ ನಿನ್ಗೆ ಸಿಕ್ಕಾಕಿಲ್ಲ' ಎಂದ.

(ಮುಂದುವರಿಯುವುದು....)

ದೂಸ್ರಾ, ತೀಸ್ರಾ, ಹಜ಼ಾರ್ರಾ....!

– ಎಚ್. ಗೋಪಾಲಕೃಷ್ಣ

ಸಿಲೋನಿನ ಒಬ್ಬ ಸ್ಪಿನ್ನು ಬೋಲರು ಬೋಲಿಂಗು ಮಾಡುವ ರೀತಿ ಅಂತಾರಾಷ್ಟ್ರೀಯ (ಈ ಪದವನ್ನ ಹೀಗೆ ಬರೀಬಹುದೇ ಅಂತ ಒಂದು ಸಂಶಯ ತನ್ನ ತಲೆಯನ್ನು ಬಹಳ ವರ್ಷ ಕಾಡಿದೆ. ಅಂತರ್ರಾಷ್ಟ್ರೀಯ=ಅಂತ ಬರೆದಾಗ ಇದನ್ನ ಹೀಗೆ ಬರೆಯೋದು ತಪ್ಪು ಅಂತ ಕೇಶೀರಾಜ ಹೇಳಿದಾನೆ ಅಂತ ನನ್ನ ಗೆಳತಿಯೊಬ್ಬರು ಪ್ರೂವು ಮಾಡಿಬಿಟ್ಟರು! ಅದನ್ನ ಹೇಗೆ ಬರೆಯೋದು ಅಂತ ಕೇಳಿದಾಗ ಅವರೇ ಸೋದಾಹರಣವಾಗಿ ಅಂತಾರಾ... ಅನ್ನೋದು ಸರಿ ಪ್ರಯೋಗ ಅಂತ ಮತ್ತೆ ಸೋದಾಹರಣವಾಗಿ ವಿವರಿಸಿದರು! ನನಗೇನೋ ಈ ರೀತಿ ಉಪಯೋಗಿಸುವ ಮನಸ್ಸಿಲ್ಲ - ಅದರಿಂದ ಇಂಥಹ ಪದಗಳನ್ನ ಉಪಯೋಗಿಸಲೇಬಾರದು ಅಂತ ತೀರ್ಮಾನ ತಗೊಂಡಿದ್ದರೂ ಪರ್ಯಾಯ ಪದ ಸಿಗೋಗಂಟ ಇದರ ಪ್ರಯೋಜನವೇ ಇರುತ್ತೆ! ಪ್ಲೀಸ್ ಕ್ಷಮಿಸಿ...) ಕ್ರಿಕೆಟ್ಟಿನ ವಲಯದಲ್ಲಿ ಒಂದು ರೀತಿಯ ''ಸ್ಟಾರ್ಮ್ ಇನ್ ಟೀ ಕಪ್'' ಗೆ ಕಾರಣವಾಗಿದೆಯಂತೆ.

ದೂಸ್ರಾ ಬೋಲಿಂಗನ್ನ ಯಾರು ಯಾರೋ ಮಾಡಿದಾಗ ಈ ತರಲೆ - ತಾಪತ್ರಯ ಇರಲಿಲ್ಲ, ಈಗೇಕೇ? ಅಂತ ಇನ್ನೂ ಸಿಲೋನಿನವರು ಕೇತೆ ತೆಗೆದಿಲ್ಲವಂತೆ. ಆದರೂ ಎಷ್ಟೋ ಸಲ ನಾವುಗಳು ನಮ್ಮ ಕ್ರಿಕೆಟ್ಟಿನ ಜಮಾನಾದಲ್ಲಿ ಎಲ್ಲಾ ಎಸ್ಟಾಬ್ಲಿಷ್ಡ್ ರೂಲುಗಳನ್ನೂ ಗಾಳಿಗೆ ತೂರಿದ್ದು ನನ್ನ ನೆನಪಿನಲ್ಲಿ ಹೊಡಕೊಂಡು ಬರುತ್ತಿದೆ. ಈಗ ನಿಮ್ಮನ್ನು ಆ ಕಾಲದ ನಾಸ್ಟಾಲ್ಜಿಕ್ ಕೊರೆತಕ್ಕೆ ಸಾಗಿಸಲೇ?

ನಮ್ಮ ಟೀಮಿನಲ್ಲಿ ಆ ಕಾಲದಲ್ಲೇ ಒಬ್ಬ ಒಳ್ಳೇ ಫ಼ಾಸ್ಟು ಬೋಲರು ಇದ್ದ. ಆ ಫ಼ಾಸ್ಟು ಬೋಲರು ಆಡದೇ ಇದ್ದರೆ ಮಾತ್ರಾ ನಾವು ನಿಮ್ಮ ಸಂಗಡ ಆಡೋದೂ ಅಂತ ನಮ್ಮ ಎದುರಾಳಿ ಟೀಮುಗಳು ಒಂದು ಕ್ಲಾಸು ಹಾಕುತ್ತಿದ್ದವು. ಈ ಕ್ಲಾಸು ಹಾಕೋದಕ್ಕೂ ಕಾರಣ ಅಂದರೆ ಹಲವಾರು ಸಲ ಈತ ಎದುರು ಟೀಮನ್ನ ಹದಿನೈದು ರನ್ನುಗಳ ಒಳಗೆ ಔಟು ಮಾಡಿಬಿಟ್ಟಿದ್ದ. ಬಾಲನ್ನ ವಿಕೆಟ್ಟಿನ ಮೇಲೆ ಎಸೆದು ಔಟು ಮಾಡಿದರೆ ಸರೀ, ಆದರೆ ನಿಮ್ಮೋನು ಬಾಲನ್ನು ಮೈಮೇಲೆ ಎಸೆದು ಭಯ ಉಂಟುಮಾಡಿ ಭಯದಿಂದ ನಮ್ಮ ಆಟಗಾರರು ಔಟಾಗುವಂತೆ ಮಾಡುತ್ತಾನೆ ಅಂತ ಎದುರು ಟೀಮಿನ ಮ್ಯಾನೇಜರು ನಮ್ಮ ಮೇಲೆ ಆರೋಪ ಹೊರಿಸುತ್ತಿದ್ದ!

ಲೂಸು ಬಡ್ಡೀಮಗ, ಆಗ ತಾನೇ ಸೈಕಾಲಜಿಯಲ್ಲಿ ಎರಡನೇ ಬಿ.ಎ. ಕಟ್ಟಿದ್ದ, ನಮಗೋ ಈ ರೀತಿ ಭಯ ಹುಟ್ಟಿಸೋದಕ್ಕೆ ಅವನು ನೀಡುತ್ತಿದ್ದ ಲಾಜಿಕ್ಕುಗಳು ಅರ್ಥವೇ ಆಗದು! ಆದರೆ ಎದುರು ಪಾರ್ಟಿಯವರು ಕಾರಿನಲ್ಲಿ ಬಂದು ಮ್ಯಾಚುಗಳನ್ನು ಆಡುತ್ತಿದ್ದರು, ನಮ್ಮ ಯಾರ ಹತ್ತಿರವೂ ಸೈಕಲ್ಲೂ ಸಹ ಇರಲಿಲ್ಲ ಆ ಕಾಲದಲ್ಲಿ, ಆದುದರಿಂದ ಅವರು ಹೇಳಿದ ಹಾಗೆ ಕೇಳಿಕೊಂಡು ಫಾಸ್ಟ್ ಬೋಲರನ್ನ ಬರೀ ಫೀಲ್ಡಿಂಗಿಗೆ ಇಟ್ಟುಕೊಂಡು ಆಡುತ್ತಿದ್ದೆವು. ನಮ್ಮ ಏರಿಯಾದಲ್ಲದ ಟೀಮು ಜತೆ ಆಡಬೇಕಾದಾಗ ಮಾತ್ರಾ ಇವನಿಗೆ ಫಾಸ್ಟ್ ಬೋಲಿಂಗಿಗೆ ಅವಕಾಶ ಸಿಕ್ಕುತ್ತಿತ್ತು! ಇವನು ಈ ರೀತಿ ಮೈಮೇಲೆ ಬಾಲು ಎಸೀತಾನೆ ಅಂತ ಅವರಿಗೆ ತಿಳಿಯೋ ಅಷ್ಟರಲ್ಲಿ ನಾವು ಒಂದೆರಡು ಮ್ಯಾಚು ಗೆದ್ದುಬಿಡುತ್ತಿದ್ದೆವು!

ಕೆಲವು ಕಿಲಾಡಿ ಟೀಮುಗಳು ಮೊದಲೇ ಅವರ ಗುಪ್ತ ದಳವನ್ನು ಕಳಿಸಿ ನಾವು ಆಡುವ ರೀತಿಯನ್ನು ತಿಳಿದುಕೊಳ್ಳುತ್ತಿದ್ದರು, ನಮ್ಮ ಲೋಕಲ್ ಎದುರಾಳಿಗಳೇ ನಮ್ಮ ಪ್ಲಸ್ ಪಾಯಿಂಟು-ಫಾಸ್ಟ್ ಬೋಲರಿನ ಸಂಗತಿಯನ್ನ ಅವರಿಗೆ ತಿಳಿಸಿಬಿಟ್ಟು ಹುಷಾರು, ಕನಿಷ್ಟ ಆರು ಜನಕ್ಕೆ ಹನ್ನೆರಡು ಕಡೆ ಮೂಳೆ ಮುರಿಯುತ್ತೆ ಅಂತ ಹೆದರಿಸಿಬಿಡೋರು. ಈ ಥರಹದ ಅಪಪ್ರಚಾರ ತಪ್ಪಿಸಿಕೊಳ್ಳಲು ನಾವು ನಮ್ಮ ಫಾಸ್ಟ್ ಬೋಲರು ಫಾಸ್ಟ್ ಬೋಲಿಂಗನ್ನೇ ಮಾಡೋದಿಲ್ಲ ಅಂತ ಊರ ಮುಂದಿನ ಹನುಮಂತ ದೇವರ ಗುಡಿಯಲ್ಲಿ ದೇವರೆದುರಿಗೆ ಪ್ರಮಾಣ ಮಾಡಿದಾನೆ, ನೀವು ಹೆದರಿಕೆ ಬಿಟ್ಟು ಬಂದು ನಮ್ಮ ಸಂಗಡ ಆಡಬಹುದು ಅಂತ ಭರವಸೆ ನೀಡುತ್ತಿದ್ದೆವು. ನಮ್ಮ ಭರವಸೆಯನ್ನ ನಂಬಿ ಕೆಲವು ಟೀಮು ನಮ್ಮ ಮೇಲೆ ಮ್ಯಾಚು ಹಾಕೋವು, ನಮ್ಮ ಫಾಸ್ಟ್ ಬೋಲರಿಗೆ ಮತ್ತೊಂದು ಉಪಾಯ ಹೇಳಿಕೊಟ್ಟಿದ್ದೆವು. ಅದೇನಪ್ಪಾ ಅಂದರೆ ಫಾಸ್ಟ್ ಬೋಲಿಂಗು ಮಾಡಬೇಡ ಆದರೆ ಪಿಂಡಾ ಬೋಲಿಂಗು ಮಾಡು ಅಂತ.


ಪಿಂಡಾ ಬೋಲಿಂಗು ಅಂದರೆ ಈಗಿನ ಕಾಲದ ಕ್ರಿಕೆಟಿಗರಿಗೆ ಗೊತ್ತೋ ಇಲ್ಲವೋ ತಿಳೀದು. ಬೋಲರು ಬಾಲು ಎಸೀತಾನೆ ನೋಡೀ, ಮೊದಲ ಪಿಚ್ಚು ಬೀಳುತ್ತೆ! ಇಂತಹ ಪಿಂಡ ಉರುಳಿಸುವುದರಲ್ಲಿ ನಮ್ಮ ಟೀಮಿನಲ್ಲಿ ಆಗ ಸುಮಾರು ಜನನ್ನ ತಯಾರಿಸಿದ್ದೆವು!

ಇದೊಂದು ರೀತಿಯಾದರೆ ಮತ್ತೊಂದು ಟೆಕ್ನೀಕನ್ನ ನಾವೇ ಕಂಡುಹಿಡಿದಿದ್ದೆವು. ಈ ಟೆಕ್ನೀಕು ಏನಪ್ಪಾ ಅಂದರೆ ಎದುರುಗಡೆ ಬಾಟ್ಸ್‌ಮನ್ನು ಹತ್ತಕ್ಕಿಂತಲೂ ಜಾಸ್ತಿ ರನ್ನು ಹೊಡೆದ ಅಂದರೆ ಅವನು ಹನ್ನೊಂದನೇ ರನ್ನು ಬಾರಿಸಿ ಓಡಬೇಕಾದರೆ ಅವನ ಬುರುಡೆಗೆ ಗುರಿ ಮಡಗಿ ರನ್ನರ್ ಕ್ರೀಸಿನ ಹತ್ತಿರ ಬಾಲನ್ನ ಎಸೆಯೋದು ರನ್ನರ್ ಕ್ರೀಸಿನ

ಬಳಿ ಬ್ಯಾಟ್‌ಮನ್ ಬರುವುದಕ್ಕೂ ನಾವು ಶಕ್ತಿಬಿಟ್ಟು ಎಸೆದ ಬಾಲು ಅವನನ್ನು 'ಇಂಟರ್‌ಸೆಪ್ಟ್' ಮಾಡುವುದಕ್ಕೂ ಸರಿ ಹೋಗುತ್ತಿತ್ತು. ಭುಜಕ್ಕೋ ಹೊಟ್ಟೆಗೋ ಮೊಣಕಾಲಿಗೋ ಬಾಲು ಬಿದ್ದು ಆಟಗಾರ ಕಂಪಲ್ಸರಿಯಾಗಿ ಆರುವಾರ ರೆಸ್ಟ್ ತೆಗೆದುಕೊಳ್ಳಲೇಬೇಕಾಗುತ್ತಿತ್ತು. ಆದರಿಂದ ನಿರಾಯಾಸವಾಗಿ ನಾವು ಮ್ಯಾಚು ವಿನ್ ಮಾಡುತ್ತಿದ್ದೆವು. ಈಚೆಗೆ ಇಂತಹ ಟೆಕ್ನೀಕುಗಳನ್ನು ಯಾಕೋ ಯಾರೂ ಪ್ರಯೋಗಿಸುತ್ತಲೇ ಇಲ್ಲವಲ್ಲ ಎಂಬ ದುಃಖ ನನಗಿದೆ. ನೂರಕ್ಕೆ ತೊಂಬತ್ತು ಸಲ ಈ ಪ್ರಯೋಗದಲ್ಲಿ ಯಶಸ್ವಿಯಾಗುತ್ತಿದ್ದೆವು ಮತ್ತು ನಾವು ಈ ಟೆಕ್ನೀಕುಗಳನ್ನು ಅಳವಡಿಸಿಕೊಂಡಾಗ ಯಾವ ಮ್ಯಾಚುಗಳನ್ನೂ ಸೋತಿದ್ದೇ ಇಲ್ಲ...!

ಖಾಸಗಿಯಾಗಿ ನೀವೋ ಅಥವಾ ಕ್ರಿಕೆಟ್ ಬೋರ್ಡೋ ನನ್ನ ಸಂಗಡ ಮಾತುಕಥೆಗೆ ಕೂತರೆ ನನ್ನ ಬಳಿ ಯಾರೂ ತಕರಾರುಗಳನ್ನು ತೆಗೆಯದ, ಹಲವಾರು ಮ್ಯಾಚುಗಳನ್ನು ಸುಲಭವಾಗಿ ಯಾರಿಗೂ ಸಂಶಯವೇ ಬರದ ರೀತಿಯಲ್ಲಿ ಗೆಲ್ಲುವ ಸಾವಿರಾರು ಟೆಕ್ನೀಕುಗಳು ಇವೆ. ದೂಸ್ರಾ ಏನು? ತೀಸ್ರಾ, ಛಾಸ್ರಾ, ಸತ್ರಾ, ಹಜಾರ್ರಾ, (ಹೀಗೆ ಬರೀಬಹುದಾ? ನನಗೆ ತಿಳೀದು - ಮತ್ತೆ ನನ್ನ ಗೆಳತಿ ಮೊರೆ ಹೋಗಬೇಕು!) ದಾರಿಗಳನ್ನ ನಾವು ಆ ಕಾಲದಲ್ಲೇ ಕಂಡುಹಿಡಿದಿದೀವಿ - ಬನ್ನಿ ದೂಸ್ರಾಗೆ ಪರ್ಯಾಯ... ಬೇಕಿದ್ದರೆ....

★★★



ನಿಮ್ಮ ಪತ್ರಗಳು

ಮಾನ್ಯರೆ,

ವಂದನೆಗಳು,

ದಿ. 8-2-2004 ರಂದು ಬೆಳಗಾವಿಯ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಬಿ.ಎಚ್. ಕುಲಕರ್ಣಿಯವರ 'ಕುಲುಕುಲು' ಎಂಬ ನಗೆ ಬರಹಗಳ ಸಂಗ್ರಹದ ಬಿಡುಗಡೆ ಸಮಾರಂಭ ನಡೆಯಿತು. ಪುಸ್ತಕದ ಬಿಡುಗಡೆ ಮಾಡುತ್ತಾ ಹೆಸರಾಂತ ಹಾಸ್ಯ ಸಾಹಿತಿಗಳಾದ ಶ್ರೀನಿವಾಸ ವೈದ್ಯರು ತಾವು ಕೆಳಗಡೆ ಮುಖಿಮಾಡಿ ಏನನ್ನೋ ನೋಡುತ್ತಿರುವಾಗ ಫೋಟೋ ಗ್ರಾಫರರು ತಮ್ಮ ಬೋಳು ತಲೆಯ ಫೋಟೋ ತೆಗೆದುಕೊಂಡರೆಂದು ಗೋಳಾಡುತ್ತ ''ನನ್ನ ಅಂಥ ಬೋಳು ತಲೆಯ ಫೋಟೋ ಪತ್ರಿಕೆಗಳಲ್ಲಿ ಹಾಕುವುದು ಬೇಡ, ಯಾಕಂದರೆ, ಜನರು ನನ್ನನ್ನು ನಾನೆಂದು ಗುರುತಿಸದೆ ಬೇರೆ ಯಾರೊ ಬೋಳುತಲೆಯವನೆಂದು ತಿಳಿದುಕೊಳ್ಳುವ ಅಪಾಯವಿದೆ'' ಎಂದು ತಮ್ಮ ಆತಂಕವನ್ನು ಹಾಸ್ಯವಾಗಿ ವ್ಯಕ್ತಪಡಿಸಿದರು.

ಆ ಬೋಳು ತಲೆಯ ಕುರಿತೇ ಕೊನೆಯಲ್ಲಿ ಆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಮಲಾ ಹೆಮ್ಮಿಗೆಯವರು ಮಾತನಾಡುತ್ತ ಹೆಂಗಸರಿಗೆ ಕೂದಲು ಕಡಿಮೆಯಾಗುವುದು ತೀರ ಕಡಿಮೆ. ಆದರೂ ಅವರಿಗೆ 'ಗಂಗಾವನ'ಗಳ ಆಸರೆ ಇರುತ್ತದೆ ಅವರಿಗೆ ಗಂಡಸರಂಥ (ದಯನೀಯ) ಪರಿಸ್ಥಿತಿ ಬರುವುದಿಲ್ಲವೆಂದು ಸಂತೋಷಪಟ್ಟರು.

ಆ ಸಂದರ್ಭದಲ್ಲಿ ನಾನು
ಬೋಳು ಬೋಳೆಂದೇತಕೆ
ಬೀಳುಗಳೆಯುವಿ ತಮ್ಮಾ?
ಬೋಳಾಗಿಯೇ ಬಂದ ನೀನು
ಬೋಳಾಗಿಯೇ ಹೋಗುವುದಿದೆಯಲ್ಲ!
ಬೋಳೇ ಆದಿ ಬೋಳೇ ಅಂತ್ಯ
ನಡುವಿನ ಈ ಅವಕಳಿಗೆ
ಏಕಿಷ್ಟು ಕೊಂಬು ಕಹಳೆ?
ಎಂದು ಮನದಲ್ಲಿಯೇ ಉದ್ಗರಿಸಿದೆ
ಬೋಳು ತಲೆಯವನಾದ ನಾನು ಮತ್ತಿನ್ನೇನು ಮಾಡಲು ಸಾಧ್ಯ?

– ಎಂ.ಸಿ. ಆಂಟಿನ, ಬೆಳಗಾವಿ

ಮಾನ್ಯ ಸಂಪಾದಕರಿಗೆ,

ಜುಲೈ ಸಂಚಿಕೆಯಲ್ಲಿ 'ಸಮಗಮಾರತೆ' ಸೂಚಿಸಿದ ಶ್ರೀ ಶ್ರೀನಿವಾಸ ವೈದ್ಯರ ಪತ್ರಕ್ಕೊಂದು 'ಪ್ರತಿಕ್ರಿಯೇಷನ್' ಇಲ್ಲಿದೆ:

'ನಾ ಗಮಾರ ನೀ ಗಮಾರ
ಯಾಕ್ರೊ ಈ ಯವಾರ,
ನಾಕು ಕೋಟಿ ನಾವಿಲ್ವ
'ಬೂಂ' ಟಾಯಿಂಗ್ ಬಾರ!
ಜೋಕು ಮಿಡಿದ ಶೀನಪ್ಪ
ನೀವ್ ಆದೀರಿ ಪೂರ
ಥ್ಯಾಂಕ್ಸ್ ನಿಮಗೆ ಡಾಕಟ್ರಪ್ಪ
ಇಳೀತ್ ತಲೀಭಾರ!'

– ಎಸ್ಕಾಮೂರ್ತಿ, ಬೆಂಗಳೂರು

ಹೀಗೊಂದು ಹವ್ಯಾಸ

– ಇಂದು ರಮೇಶ್

ನಾನೇನೂ ಹೊಸ ಸುದ್ದಿ ಹೇಳುತ್ತಿಲ್ಲ. ಎಲ್ಲರಿಗೂ ಗೊತ್ತು, ಎಷ್ಟೊಂದು ಟೀವಿ ಚಾನೆಲ್ಲುಗಳು ಹುಟ್ಟಿಕೊಂಡಿವೆ ಅಂತ. ಅದೂ ಎಷ್ಟು ಭಾಷೆಗಳಲ್ಲಿ! ತಮಿಳು ಸಿನಿಮಾ ನೋಡಲಿಕ್ಕೆ, ದೂರದರ್ಶನದಲ್ಲಿ ಇನ್ನೂ ನಂಬಬಹುದಾದ ಸುದ್ದಿಗೆ, ಬೀಬೀಸಿಯಲ್ಲಿ ಒಳ್ಳೆಯ ಭಾಷೆಗೆ, ಸೀ ಎನ್ ಎನ್ ನಲ್ಲಿ ಅಮೆರಿಕದವರೇ ಜಾರ್ಜ್ ಬುಷ್‌ನನ್ನು ಬೈಯುವುದನ್ನು ಕೇಳುವುದಕ್ಕೆ, ಹೀಗೆ ಒಂದೊಂದು ಚಾನೆಲ್ಲಿನಲ್ಲಿಯೂ ಒಂದೊಂದು ವಿಶಿಷ್ಟವಾದ ಗುಣ ಇರುತ್ತದೆ.

ನಮ್ಮ ಮನೆಯಲ್ಲಿ ಮದ್ಯಾಹ್ನದ ಊಟಕ್ಕೆ ಕೂತಾಗ ಟೀವೀಯ ಕನ್ನಡದ ಎರಡು ಚಾನಲ್ಲುಗಳಲ್ಲಿ ತೋರಿಸುವ ಅಡಿಗೆ ಕಾರ್ಯಕ್ರಮ ನೋಡುವ ಅಭ್ಯಾಸ ಬಂದುಬಿಟ್ಟಿದೆ. ನಮ್ಮ ಪುಟ್ಟಸಿದ್ದಿಗೆ ಅದರಿಂದ ತಾನೇನೋ ಕಲಿಯಬಹುದು ಅನ್ನುವ ಯೋಚನೆ. ನಮಗೆ ಊಟಕ್ಕೆ ಬಡಿಸಿ, ಪುಸ್ತಕ ಪೆನ್ನು ತೆಗೆದುಕೊಂಡು ಹೊಸ ಹೊಸ ಅಡಿಗೆ ಮಾಡುವುದನ್ನು ಕಲಿಯುತ್ತಾಳೆ ಅವಳು. ನೋಡುವುದಕ್ಕೆ ಬಲು ಮಜ ಈ ಅಡಿಗೆ ಕಾರ್ಯಕ್ರಮಗಳು.

ನಿರೂಪಣೆ ಮಾಡಲು ಬರುವ ಯುವತಿಯರು ಮದುವೆ ರಿಸೆಪ್ಷನ್ನಿಗೆ ಹೋಗುವಂತೆ ಅಲಂಕಾರ ಮಾಡಿಕೊಂಡಿರುತ್ತಾರೆ, ಪಾಪ, ಚೆನ್ನಾಗಿ ಕಾಣಬೇಕು ಎನ್ನುವುದು ಎಲ್ಲರ ಇಚ್ಛೆ. ಇರಲಿ

ಆದರೆ ಅಡುಗೆ ಮಾಡಲಿಕ್ಕೆ ಅಂತ ಎಲ್ಲೆಲ್ಲಿಂದಲೋ ಬರುವ ಮಹಿಳೆಯರು? ಅಬ್ಬಾ, ಅದೇನು ಭಾರಿ ಸೀರೆಗಳು, ಒಡವೆಗಳು? ಮನೆಯಲ್ಲಿ ಅಡಿಗೆ ಕೆಲಸ ಮಾಡುವಾಗ ಅಕಸ್ಮಾತ್ ಒಳ್ಳೆಯ ಸೀರೆ ಉಟ್ಟಿದ್ದರೆ ಒಂದು ಟವೆಲ್ಲೋ, ಇಲ್ಲಾ ದುಪ್ಪಟ್ಟಾನೊ ಹೊದ್ದಿಕೋ ಅಂತ ನಮಗೆಲ್ಲಾ ದೊಡ್ಡವರು ಹೇಳುತ್ತಿದ್ದರು. ಅದು, ಅಡಿಗೆಯ ಏಪ್ರನ್ ಬರುವುದಕ್ಕೆ ಮುಂಚೆ. ಆಮೇಲೆ, ಏಪ್ರನ್ ಅಡಿಗೆಮನೆಯ ಗೂಟದ ಮೇಲೆ ಯಾವಾಗಲೂ ನೇತುಹಾಕಿದ್ದು ಕೆಲಸ ಮಾಡುವಾಗೆಲ್ಲ, ಮೊದಲು ಏಪ್ರನ್ ಏರಿಸುವುದು ಸಹಜವಾಗಿಯೇ ಬಂದುಬಿಟ್ಟಿತ್ತು. ಕೊನೆಗೆ ಅನೇಕ ಕುಕ್ ಬುಕ್ ಬರೆದು ಪ್ರಸಿದ್ಧರಾದ ಅನೇಕರು ಟೀವೀಯಲ್ಲಿ ತಮ್ಮ ಸ್ಪೆಷಲ್ ಅಡಿಗೆ ಮಾಡಿ ತೋರಿಸುವಾಗಲೂ ಏಪ್ರನ್ ಹಾಕಿಕೊಂಡು ನೀಟಾಗಿ ಬರುತ್ತಿದ್ದರು, ಈಗಲೂ ಬರುತ್ತಾರೆ. ಕನ್ನಡದಲ್ಲಿ ಅಡಿಗೆ ಮಾಡುವವರಿಗೆ ಅದೇನೂ ಬೇಡ!

ಹೋಗಲಿ, ಅಡಿಗೆ ಮನೆಯಲ್ಲಿ ಉದ್ದುದ್ದ ಕೂದಲನ್ನು ಬಾಚಿ, ಹಿಂದೆ ಕಟ್ಟಿ, ಸೆರಗು ಸೊಂಟದ ಸುತ್ತ ಬಂದು ಒಂದೆಡೆ ಭದ್ರವಾಗಿ ಸಿಕ್ಕಿಸಿ... ಉಹು, ಅದೆಲ್ಲ ಏನೂ ಬೇಡ ಕನ್ನಡ ಟಿವಿ ಅಡಿಗೆ ಮನೆಗೆ. ನೈಲಾನ್, ಇಲ್ಲವೇ ಭಾರಿ ಜರತಾಗಿ ಸೀರೆ, ಮುಂಗೈಯಿಂದ ಮೊಣಕೈವರೆಗೆ ಬಳೆ, ಕತ್ತಿನಲ್ಲಿ ಎರಡು ಮೂರು ಭಾರಿ ಸರಗಳು, ನೆಕ್ಲೇಸುಗಳು, ಮೇಕಪ್... ಅಬ್ಬಾ ಅವರನ್ನು ನೋಡಿದರೆ ಮುಜುಗರ ಆಗೋ ರೀತಿ ಬರುತ್ತಾರಲ್ಲಾ, ಅವರ ಮನೆಯಲ್ಲೂ ಹೀಗೇ ಅಡಿಗೆ ಮಾಡುತ್ತಾರಾ? ಇನ್ನು ಕೂದಲು? ಶಾಂಪೂ ಅಡ್ವರ್ಟೈಸ್ಮೆಂಟಿಗೆ ತಯಾರಾಗುವಂತೆ, ಕೂದಲನ್ನು ಚೆನ್ನಾಗಿ ಬ್ರಷ್ ಮಾಡಿ ಉದ್ದಕ್ಕೆ ಬಿಟ್ಟಿರುತ್ತಾರೆ. ನನಗೊಂದೇ ಭಯ, ಅವರು ಮಾಡುವ ಅಡಿಗೆಯಲ್ಲಿ ಕೂದಲು ಬೀಳುವುದಿಲ್ಲವೇ ಅಂತ. ಅದು ನೋಡಿ ಎಷ್ಟು ಬೇಜಾರಾಯಿತು ಅಂದರೆ ಒಂದು ದಿನ ಕಾರ್ಯಕ್ರಮದ ಪ್ರಾಯೋಜಕರಾದ ಒಂದು ಪ್ರಸಿದ್ಧ ಅಡಿಗೆ ಪದಾರ್ಥಗಳ ಕಂಪನಿಗೆ ಫೋನ್ ಮಾಡಿ ಅಲ್ಲಿಯ ಹಿರಿಯ ಅಧಿಕಾರಿಯೊಬ್ಬರನ್ನು ತರಾಟೆಗೆ ತೆಗೆದುಕೊಂಡಿದ್ದೆ. ಆತ ನಾನು ಹೇಳಿದ್ದನ್ನೆಲ್ಲಾ ಒಪ್ಪಿಕೊಂಡಿದ್ದ. ಆದರೆ ಕಾರ್ಯಕ್ರಮದಲ್ಲಿ ಏನೂ ಬದಲಾವಣೆ ಕಾಣಿಸಲಿಲ್ಲ.

ಇನ್ನು ಕಾರ್ಯಕ್ರಮದ ನಿರೂಪಕರು ಮಾತಾಡುವ ಶೈಲಿ. ಒಬ್ಬಾಕೆ ಚೆನ್ನಾಗಿ ಬಾಯಿತುಂಬಾ ನಗುತ್ತಾ ಸುಲಭವಾಗಿ ಮಾತಾಡುತ್ತಾಳೆ. ಆದರೆ ಇನ್ನೊಂದು ಚಾನೆಲ್ಲಿನಲ್ಲಿ ಬರುವ ಹುಡುಗಿಯರಿಗೆ, ಅಡಿಗೆಯೂ ಗೊತ್ತಿಲ್ಲ, ಮಾತಾಡುವುದೂ ಗೊತ್ತಿಲ್ಲ. ಸಿಹಿತಿಂಡಿ ಮಾಡಲು ಮೈದಾಹಿಟ್ಟು ಕಲಿಸಿದ್ದವರಿಗೆ ಆಕೆ ಕೇಳಿದ್ದು, "ಕಲಿಸಿದ್ದ ಎಲ್ಲಾ ಹಿಟ್ಟನ್ನೂ ಉಂಡೆ ಮಾಡಿಕೊಳ್ಳಬೇಕಾ? ಇಲ್ಲ ಸ್ವಲ್ಪ ಹಿಟ್ಟನ್ನು ಮಾತ್ರವ್ರೋ?" ಅಡಿಗೆ ಮಾಡಲು ಬಂದಿದ್ದ ಮಹಿಳಾಮಣಿ ಸ್ವಲ್ಪ ತಬ್ಬಿಬ್ಬಾಗಿ "ತಿಂಡಿ ಮಾಡುವುದಕ್ಕೇ ಕಲಸಿದ್ದು, ಅದರಿಂದ ಎಲ್ಲಾ ಹಿಟ್ಟನ್ನೂ ಉಂಡೆ ಮಾಡಲೇಬೇಕು" ಎಂದರು.

ಹೊಸ ರುಚಿಯ ಅಡಿಗೆ ಮಾಡುತ್ತಿದ್ದಾಗ ಒಬ್ಬಾಕೆ ಕೊನೆಗೆ, ಹಾಲು, ಸಕ್ಕರೆ, ಬಾದಾಮಿ, ಯಾಲಕ್ಕಿ, ಕೇಸರಿ ಇನ್ನೂ ಏನೇನೋ ಹಾಕಿ ಸಿಹಿ ತಿಂಡಿ ತಯಾರಾದಾಗ, "ಇದಕ್ಕೆ ಅಲಂಕಾರಕ್ಕೆ ಒಂದಷ್ಟು ಡ್ರೈ ಫ್ರೂಟ್ ಬೇಡವಾ" ಅಂತ ಕೇಳೋದೇ? ಎಲ್ಲ ಹಾಕಿದೆಯಲ್ಲಾ ಅಂದರೆ ಅವಳು ಪೆದ್ದು ಪೆದ್ದಾಗಿ "ಇಲ್ಲ, ಅಲಂಕಾರಕ್ಕೆ" ಅಂದಳು.


"ಎಣ್ಣೆಯಲ್ಲಿ ಈರುಳ್ಳಿ ಹಾಕಬೇಕು" ಎಂದರೆ, ನಮ್ಮ ನಿರೂಪಕಿ, "ಎಣ್ಣೆ ಬಿಸಿ ಆಗಬೇಕಾ?, ಸಾಸಿವೆ ಇಲ್ಲದೆ ಪಲ್ಯ ಆಗುತ್ತಾ?, ಇದೇನ್ರೋ ನೀವು ಸಾಂಬಾರ್ ತರಹ ಮಾಡುತ್ತಿದ್ದೀರಿ, ಇದರಲ್ಲೇ ಪಲ್ಯ ಆಗುತ್ತಾ?" ಅಂತೆಲ್ಲ ಕೇಳಿದಳು.

ಎಲ್ಲಾ ನಿರೂಪಕಿಯರೂ ಮಕ್ಕಳು ತಿಂಡಿ ತಿನ್ನಲು ಗಲಾಟೆ ಮಾಡುತ್ತಾರೆ

ಅಂದುಕೊಂಡುಬಿಟ್ಟಿದ್ದಾರೆ. ಅದಕ್ಕೆ ಒಮ್ಮೆ ಒಬ್ಬಾಕೆ ಹೇಳುತ್ತಿದ್ದಳು - ''ಮಕ್ಕಳಿಗೆ ಇದು ನೋಡೋದಕ್ಕೆ ಚೆನ್ನಾಗಿರಬೇಕು, ಅದಕ್ಕೆ ಮೇಲೆಲ್ಲಾ ಕೊತ್ತಂಬರಿ ಸೊಪ್ಪು ಉದುರಿಸಿ'' ಅಂತ. ಮಕ್ಕಳಿಗೆ ತಾವು ತಿನ್ನುವ ತಿಂಡಿಯಲ್ಲಿ ಏನೂ ಅಡ್ಡ ಬರಬಾರದು, ಆದಷ್ಟೂ ಬೇಗ, ತಿಂದು ಮುಗಿಸಿ ಆಟಕ್ಕೋ ಟೀವೀ ನೋಡುವುದಕ್ಕೋ ಹೋಗಬೇಕು ಎನ್ನುವುದೇ ಗುರಿ ಅಂತ ಯಾರಿಗೂ ಯಾಕೆ ಹೊಳೆಯುವುದಿಲ್ಲಾ?

ನಿರ್ಮಾಪಕಿಯರಿಗೆ ಅಡಿಗೇನೂ ಗೊತ್ತಿಲ್ಲ, ಮಾತಾಡೋದೂ ಬರೊಲ್ಲಾ ಅಂದೆನಲ್ಲ, ಅದು ನಿಜ. ಯಾರೋ ಹೆಣ್ಣುಮಗಳು ಪಾಪ ಪನೀರ್ ಹಾಕಿ ಏನೋ ವ್ಯಂಜನ ಮಾಡುವುದಕ್ಕೆ ತೋರಿಸುತ್ತಿದ್ದಳು. ನಮ್ಮ ಹೀರೋಯಿನ್ 'ಪನೀರ್ ಯಾಕೆ ಹಾಕಬೇಕು, ಬೇರೆ ಏನಾದರೂ ಯಾಕೆ ಹಾಕಬಾರದು?' ಅಂತ ಕೇಳಿದಳು. ಸಿಹಿ ತಿಂಡಿಗೆ ದ್ರಾಕ್ಷಿ, ಗೋಡಂಬಿ ಹಾಕಬೇಕು ಅಂದರೆ ಈಕೆ ಬೇರೆ ಏನಾದರೂ ಡ್ರೈ ಫ್ರೂಟ್ ಹಾಕಿದರೆ ಹೇಗೆ? ಅಂತಾಳೆ. ಈರುಳ್ಳಿ ಸಣ್ಣಾಗಿ ಹೆಚ್ಚ್ಬೇಕು ಅಂದರೆ ಇವಳು ದಪ್ಪಕ್ಕೆ ಹೆಚ್ಚಿದರೆ ಹ್ಯಾಗೆ? ಅಂತ ಕೇಳುತ್ತಾಳೆ. ಅವರು ಮಾತಾಡುವ ವೈಖರಿ ಹೇಗಿದೆ ಅಂದರೆ, ನನಗೆ ಆಶ್ಚರ್ಯವಾಗುತ್ತೆ, ಇದುವರೆಗೆ ಅಲ್ಲಿಗೆ ಬಂದ ಮಹಿಳೆಯರಲ್ಲಿ ಯಾರೂ ಆಕೆಯನ್ನು ಬಿಸಿ ಸೌಟಿನಿಂದ ಹೊಡೆದಿಲ್ಲವೇಕೆ ಅಂತ.

ಟೀವೀ ಅಡಿಗೆ? ಮಾಡುವುದಕ್ಕೋ ನೋಡುವುದಕ್ಕೋ? ಆದರೆ ಒಂದು ನೆನಪಿರಲಿ, ನಿಮ್ಮಲ್ಲಿ ಎಷ್ಟು ಸಹನೆ ಇದೆ, ಅಂತ.



ಹಾಸ್ಯ ಸನ್ಮಾನ

– ಕುಮುದಾ ಪುರುಷೋತ್ತಮ್

''ನನಗೆ ಈ ಸಂಸಾರ ಸಾಕಾಗಿ ಹೋಗಿದೆ. ಯಾವಾಗ ನೋಡ್ಲಿ ತಿಂಡಿ ತೀರ್ಥ, ಉಪ್ಪಿಟ್ಟು, ಚಿತ್ರಾನ್ನ, ಸಬ್ಬಕ್ಕಿ ಪಾಯಸ, ಮುಸುರೆ ತಿಕ್ಕು, ಬಟ್ಟೆ ಜಾಲಿಸು, ನೆಲ ವರೆಸೂಂತ. ಒಂದು ಮನರಂಜನೆ, ಸಂಗೀತ, ಸಾಹಿತ್ಯ, ಕಲೆ...ಒಂದೂ ಕೇಳ್ಬೇಡ.'' ಮನೆ ಕೆಲಸದವಳು ಕಳೆದ ಒಂದು ವಾರದಿಂದ ಬರದೇ ಇದ್ದದ್ದು, ಹಬ್ಬಗಳ ಸಾಲು, ನೆಂಟರಿಷ್ಟರ ಆಗಮನ ಎಲ್ಲಾ ಸೇರಿ ಕಾವೇರಮ್ಮನಿಗೆ ಕಾವೇರಿ ರಕ್ತದೊತ್ತಡ ವಿಪರೀತಕ್ಕೇರಿತ್ತು. ಹೀಗಾಗಿ ಯಜಮಾನರ ಕರ್ಣಾಲಿಕೆಯ ವ್ಯಾಪ್ತಿಯಲ್ಲಿ ಅಣ್ವಸ್ತ್ರ ಪ್ರಹಾರ ಮೊದಲಾಗಿತ್ತು. ಯಜಮಾನರೂ ಕೇಳುವಷ್ಟು ಕೇಳಿ ಮನಕರಗಿ ಪೇಪರಿನಲ್ಲಿ 'ನಗರದಲ್ಲಿ ಇಂದು' ಕಾಲಂನತ್ತ ಕಣ್ಣಾಡಿಸಿದರು. 'ಹಾಸ್ಯ ಸಮಾರಂಭ - ಸನ್ಮಾನ ಕಾರ್ಯಕ್ರಮ - ಉಲ್ಲಾಸ ಸಭಾಂಗಣದಲ್ಲಿ' ಎಂದಿತ್ತು. ಪಾಪ, ಬೇಸರಿಸಿದ್ದಾಳೆ. ಖರ್ಚಿಲ್ಲದೆ ಹಾಸ್ಯ ಕಡಲಲ್ಲಿ ಈಜಾಡಿ ನಕ್ಕು ನಗಲಿ ಎಂದು ಪತ್ನಿಯನ್ನು ಹೊರಡಿಸಿಕೊಂಡು ತಮ್ಮ ಹಳೆಯ ವಾಹನದಲ್ಲಿ ಹೊರಟರು.

ಹಲವಾರು ದಿನಗಳಿಂದ ಗ್ಯಾರೇಜಿನಲ್ಲಿ ಬೆಚ್ಚನೆ ಮಲಗಿ ಜಡ್ಡುಗಟ್ಟಿದ್ದ ಕಾರನ್ನೆಬ್ಬಿಸಲು ಸಾಕಷ್ಟು ಶ್ರಮ ಪಡಬೇಕಾಯಿತು. ಆಹಾರವಿಲ್ಲದೆ ನಿತ್ರಾಣವಾಗಿದ್ದ ಕಾರಿಗೆ ಬಂಕಿನಿಂದ ತಂದ ಪೆಟ್ರೋಲ್ ತುಂಬಿಸಿ ಅರೆಜೀವವಾಗಿದ್ದ ಬ್ಯಾಟರಿಗೆ ಜೀವ ತುಂಬಿ ಮಾಲೀಸು ಮಾಡಿ ಪೂಸಿ ಹೊಡೆದ ಮೇಲೆಯೇ ಅದು ಮುಂದಕ್ಕೆ ಚಲಿಸಿದ್ದು. ಯದ್ವಾ ತದ್ವಾ ಓಡಾಡುವ ನಗರದ ವಾಹನದ ಭರಾಟೆಯಲ್ಲಿ ಜೀವ ಉಳಿಸಿಕೊಂಡು ಅಲ್ಲಲ್ಲಿ ಎದುರಾಗುತ್ತಿದ್ದ ಫ್ಲೈಓವರ್‌ಗಳ ಮೇಲೆಯೋ ಕೆಳಗೋ ನುಸುಳಿ ವಾಹನ ಪಾಕವೆಂಬ ಚಕ್ರವ್ಯೂಹ ಭೇದಿಸಿ ಸಭಾಂಗಣ ತಲುಪುವ ವೇಳೆಗೆ ವೇಳೆ ಮೀರಿತ್ತು. ಭವನದ ಮುಂದೆ ಸಾಲುಗಟ್ಟಿ ನಿಂತ ವಾಹನಗಳ ನಡುವೆ ನಿಲ್ಲಿಸಲು ಸ್ಥಳ ಸಿಗದೆ ''ನೀನಿಳಿದು ಒಳಗೆ ಹೋಗು. ನಾನು ಮುಂದೆ ಹೋಗಿ ನಿಲ್ಲಿಸಿ ಬರುತ್ತೇನೆ'' ಎಂದು ಪತ್ನಿಯನ್ನಿಳಿಸಿ ಮುಂದೆ ಸಾಗಿದರು. ಕಾರು ಮುಖ್ಯರಸ್ತೆ ಬಿಟ್ಟು ಅಡ್ಡದಾರಿಗಿಳಿಯಿತು. ಅಲ್ಲೂ ವಾಹನಗಳ ಸಾಲು! ಮತ್ತೊಂದು ಮುಖ್ಯರಸ್ತೆ, ಅಡ್ಡರಸ್ತೆ, ಗಲ್ಲಿ ಹೀಗೇ ಸಾಗುತ್ತಾ ಇದ್ದಾಗ ಅವರ ಕರ್ಮ ಸವೆದು ಯಾರೋ ತಮ್ಮ ವಾಹನ ನಿಲುಗಡೆಯಿಂದ ಈಚೆ ತೆಗೆಯುತ್ತಿದ್ದದ್ದು ಕಣ್ಣಿಗೆ ಕಂಡಿತು. ಯಜಮಾನರು ಆನಂದತುಂದಿಲರಾದರು. ಈ ವೇಳೆಗೆ ಅವರು ಸಭಾಂಗಣದಿಂದ ಒಂದೂವರೆ ಮೈಲಿ ಬಂದಾಗಿತ್ತು. ಕಾಲೆಳೆದುಕೊಂಡು ಸಭಾಂಗಣದತ್ತ ಹೆಜ್ಜೆ ಹಾಕಿದರು.

ಅಷ್ಟ ದಿಕ್ಕುಗಳಿಂದಲೂ ತುಂಬಿ ತುಳುಕುತ್ತಿದ್ದ ಸಭಾಂಗಣದೊಳಕ್ಕೆ ಹೇಗೋ ನುಸುಳಿ ಪತ್ನಿಯನ್ನು ಹುಡುಕಿಯೇ ಹುಡುಕಿದರು. ಎಲ್ಲೂ ಆಕೆಯ ಸುಳಿವಿದ್ದರೆ! ಎಲ್ಲಿ ತಪ್ಪಿಸಿಕೊಂಡಿದ್ದಾಳೋ. 'ಹೆಂಡತಿ ಕಾಣೆಯಾಗಿದ್ದಾಳೆ' ಎಂದು ಎತ್ತರ, ಧಪ್ಪ ಇತ್ಯಾದಿಯ

ಏವರ ನೀಡಿ ಮೈಕಿನಲ್ಲಿ ಪ್ರಸಾರ ಮಾಡಿಸುವುದೇ? ಇಂತಹ ಆಲೋಚನೆ ಬರುತ್ತಿದ್ದಂತೆ ನೋಟ ವೇದಿಕೆಯತ್ತ ಹರಿದು ಅಲ್ಲೇ ನಿಂತುಬಿಟ್ಟಿತು. ತಾವು ನೋಡುತ್ತಿರುವುದು ಸತ್ಯವೋ ಅಥವಾ ಭ್ರಮೆಯೋ? ಸಂದೇಹವೇ ಇಲ್ಲ. ಕಾವೇರಿ ವೇದಿಕೆ ಏರಿ ಗಣ್ಯಾತಿಗಣ್ಯರ ನಡುವೆ ನಸುನಗುತ್ತಾ ಕುಳಿತುಬಿಟ್ಟಿದ್ದಾಳೆ! ಅಲ್ಲಾ, ಇವಳಿಗೆಷ್ಟು ಪೊಗರು? ತನ್ನನ್ನು ಯಾರೆಂದು ತಿಳಿದುಕೊಂಡಿದ್ದಾಳೆ? ಬುದ್ಧಿ ಜೀವಿಗಳಾದ ಸಾಹಿತಿಗಳು, ಕಲಾವಿದರು, ಇನ್ನೂ ಅನೇಕ ಕ್ಷೇತ್ರದಲ್ಲಿ ಸಾಧನೆಗೈದವರ ನಡುವೆ ಇವಳೇ? ಸುಮ್ಮನೆ ಕೆಳಗಿಳಿದು ಬಾ ಎಂದು ಇಲ್ಲಿಂದ ಹೇಳುವುದು ಹೇಗೆ? ಗಮನ ಸೆಳೆಯಲು ಕೈ ಬಾಯಿಂದ ಸಂಜ್ಞೆ ಮಾಡಲಾರಂಭಿಸಿದರು. ''ರೀ ಸ್ವಾಮಿ, ಸುಮ್ನೆ ನಿಂತ್ಕೊಳ್ರೀ. ಕೈ ನೀಡಿ ನನ್ನನ್ನು ಯಾಕ್ರಿ ತಿವೀತೀರಾ?'' ಮುಂದಿದ್ದವ ಎಗರಿ ಬಿದ್ದ. ''ಈ ಕಾವೇರಿ ಶುದ್ಧ ಪೆದ್ದು ಹೆಂಗ್ಸು, ಏನೋ ಬೇಜಾರು ಮಾಡ್ಕೊಂಡ್ಳೂಂತ ಕರೆತಂದೆ ಎಲೆ ಮರೆಯ ಕಾಯಿಯಂತೆ ಎಲ್ಲರ ನಡುವೆ ಕುಳಿತುಕೊಳ್ಳೋದು ಬಿಟ್ಟು ವೇದಿಕೆ ಏರಿಬಿಡುವುದೇ?

ನಿರೂಪಕ ಮೈಕ್ ಮುಂದೆ ಬಂದು ನಿಂತು ''ಅನಿವಾರ್ಯ ಕಾರಣಗಳಿಂದ ಮಾನ್ಯ ಸಚಿವರು ಈ ಸಮಾರಂಭಕ್ಕೆ ಬರಲಾಗದಿದ್ದಕ್ಕೆ ಫೋನ್ ಕರೆಯ ಮೂಲಕ ವಿಷಾದ ವ್ಯಕ್ತ ಮಾಡಿದ್ದಾರೆ. ತಮ್ಮ ಶ್ರೀಮತಿಯವರನ್ನು ತಮ್ಮ ಪರವಾಗಿ ಸನ್ಮಾನ ಸ್ವೀಕರಿಸಲು ಕಳುಹಿಸಿದ್ದಾರೆ'' ಎಂದ. ವೇದಿಕೆಯ ಮುಂಭಾಗದಲ್ಲಿ ಸಿಂಹಾಸನದಂತಿದ್ದ ಆಸನ ತಂದಿರಿಸಿ ಕಾವೇರಮ್ಮನನ್ನು ಅದನ್ನಲಂಕರಿಸಲು ಆಹ್ವಾನಿಸಿದ. ಆಗಲಾದರೂ ನಿರಾಕರಿಸಿದ್ದರೆ! ಉಹೂಂ ಹಲ್ಲು ಕಿರಿಯುತ್ತಾ ಎದ್ದು ಬಂದು ಸಿಂಹಾಸನಾರೂಢಳಾದಳು! ಅಲ್ಲಾ ಸಚಿವರ ಪತ್ನಿ ಎಂದೊಡನೆ ಎದ್ದು ಬಂದಳಲ್ಲಾ. ಅವಳು ನಿಜವಾಗಿ ಸಚಿವರ ಪತ್ನಿಯೋ? ಹಾಗಾದರೆ ತಾನು ಸಚಿವನೇ? ಅಥವಾ ಆಕೆ ಕಾವೇರಿಯಂತೆಯೇ ಇರುವ ಬೇರೆ ಹೆಂಗಸೋ? ತನಗೆ ತಿಳಿದಂತೆ ಕಾವೇರಿಗೆ ಜವಳಿ ತಂಗಿ ಇರಲಿಲ್ಲ. ಅಥವಾ ಹುಟ್ಟಿದ ಗಳಿಗೆಯಲ್ಲೇ ಬೇರ್ಪಟ್ಟು ಜವಳಿ ಬೇರೆಲ್ಲೋ ಬೆಳೆದು ಸಚಿವರ ಕೈಹಿಡಿದಿರುವಳೇ? 'ಸೀತಾಗೀತಾ', 'ಮೈಕೆಲ್ ಮದನ ಕಾಮರಾಜನ್' ಅಂತಹ ಅನೇಕ ಚಿತ್ರಗಳ ದೃಶ್ಯಗಳು ಕಣ್ಮುಂದೆ ಸುಳಿಯಿತು. ತನ್ನ ಊಹೆ ನಿಜವಾಗಿ ಬೇರೆಯಾಗಿದ್ದ ಅಕ್ಕ ತಂಗಿಯರು ಒಂದಾಗಿ ಆಲಿಂಗನ, ಅಶ್ರು ತರ್ಪಣ ಇತ್ಯಾದಿಗಳೆಲ್ಲಾ ಮನಸ್ಸನ್ನು ಬೆಲ್ಲಕ್ಕೆ ಇರುವೆಯಂತೆ ಮುತ್ತಿ ಭಾವುಕರಾದರು. ತಾವು ಸಚಿವರ ಷಡ್ಡಕರಾದಾಗ ದೊರೆಯುವ ಸವಲತ್ತು, ಗೌರವ ನೆನೆದು ಬೀಗಿದರು.

ವೇದಿಕೆಯ ಮೇಲೆ ಈಗ ಸಚಿವರ ಶ್ರೀಮತಿಯವರಿಗೆ ಶಾಲು ಹೊದಿಸಿ ಹಣ್ಣಿನ ಬುಟ್ಟಿ, ನೆನಪಿನ ಫಲಕ ನೀಡುತ್ತಿದ್ದರು. ಪ್ರಚಂಡ ಕರತಾಡನ ಮಿಂಚುತ್ತಿದ್ದ ಕ್ಯಾಮರಾ ಬೆಳಕಿನ ನಡುವೆ ಸಚಿವರ ಪತ್ನಿ ಕಂಗೊಳಿಸಿದರು. ಅಲ್ಲಾ, ಥೇಟ್ ಕಾವೇರಿಯಂತೆಯೇ ಇರುವಳಲ್ಲಾ! ಈಕೆ ನಾದಿನಿ ಎಂದಾದರೆ ಇನ್ನು ಮುಂದೆ ತಮ್ಮ ಮನೆಗೆ ಬಂದೇ ಬರುವಳು. ಇಬ್ಬರಲ್ಲೂ ವ್ಯತ್ಯಾಸ ತಿಳಿಯದೆ ತನ್ನಿಂದ ಏನಾದರೂ ಅಚಾತುರ್ಯ ನಡೆದರೆ? ಸಚಿವರು ತನ್ನನ್ನು ಹಿಡಿದು ಚಟ್ನಿ ಮಾಡದೆ ಬಿಡುವರೋ? ಯಜಮಾನರಿಗೆ ನಡುಕ ಉಂಟಾಯಿತು. ವಂದನಾರ್ಪಣೆ ಮುಗಿದು ಜನ ಹೊರ ನಡೆದರು. ನಿರ್ಗಮಿಸುತ್ತಿದ್ದ

ಜನ ಜಂಗುಳಿಯಲ್ಲಿ ಮತ್ತೊಮ್ಮೆ ಕಾವೇರಿಗಾಗಿ ಹುಡುಕುತ್ತಿದ್ದಾಗ ಬಿತ್ತೊಂದು ಪ್ರಹಾರ ಬೆನ್ನಿನ ಮೇಲೆ.

''ಅಲ್ರೀ. ಎಲ್ರಿಗೂ ಕಾಣುವಂತೆ ವೇದಿಕೆ ಮೇಲೆಯೇ ಅಷ್ಟು ಹೊತ್ನಿಂದ ಕುಕ್ಕರು ಬಡಿದಿದ್ದೀನಿ. ಅಲ್ಲಿ ಬಿಟ್ಟು ಎಲ್ಲೆಲ್ಲೋ ಹುಡುಕ್ತಾ ಇದ್ದೀರಲ್ಲ''

''ಸಾರಿ ಮೇಡಂ. ನೀವು ಸಚಿವರ ಪತ್ನಿ. ನನ್ನ ಮಿಸೆಸ್ಸು... ಕಾವೇರಿ ಅಂತ. ನೋಡೋಕ್ಕೆ ನಿಮ್ಮ ಥರಾನೇ ಇದ್ದಾಳೆ''

''ಯಾಕ್ರೀ ಏನಾಯ್ತು ನಿಮ್ಗೆ? ನಾನು ನಿಮ್ಮ ಹೆಂಡ್ತಿ. ಎಂದೂ ಇಲ್ಲದ್ದು ಮೇಡಂ ಗೀಡಂ ಅಂತ ಏನೇನೋ ಕರೀತಿದ್ದೀರ?

''ಹಾಗಾದ್ರೆ... ನೀನು ಕಾವೇರಿನೇನಾ? ಮತ್ತೆ ವೇದಿಕೆ ಮೇಲೆ ಏಕೆ ಹೋದೆ?''

''ಅಯ್ಯೋ ಅದೊಂದು ಕಥೆ. ಇಲ್ಲಿ ಶುರು ಮಾಡಿದ್ರೆ ಹೊತ್ತಾಗುತ್ತೆ. ಕಾರಿನಲ್ಲಿ ಕೂತು ಹೇಳ್ತೀನಿ'' ಎಂದ ಕಾವೇರಮ್ಮ ಹಣ್ಣಿನ ಬುಟ್ಟಿ, ಶಾಲು, ಫಲಕ ಯಜಮಾನರ ಕೈಗೆ ವರ್ಗಾಯಿಸಿ ಒಂದೂವರೆ ಮೈಲು ನಡೆಯುತ್ತಾ ಹೋಗಿ ಕಾರನ್ನೇರಿದರು.

ಅತ್ತ ಸಭಾಂಗಣದಲ್ಲಿ ಸಚಿವರ ಪತ್ನಿಗೆ ವಿದಾಯ ಹೇಳುತ್ತಿದ್ದಂತೆ ಕಾರ್ಯದರ್ಶಿಯ ಮೊಬೈಲ್ ರಿಂಗಣಿಸಿತು. ಸಚಿವರ ಖಾರದ ಧ್ವನಿ ಕಿವಿಯಪ್ಪಳಿಸಿತು. ''ಏನ್ರೀ, ನನ್ನ ಮಿಸೆಸ್‌ನ ನನ್ನ ಪರವಾಗಿ ಕಳ್ಸಿದ್ರೆ, ಅವಳ ಮುಖಕ್ಕೆ ಮಂಗ್ಳಾರ್ತಿ ಮಾಡಿ ಅವಮಾನ ಮಾಡಿದ್ದೀರ? ನಾನು ನಿಮ್ಮನ್ನು, ನಿಮ್ಮ ಸಂಸ್ಥೆಯನ್ನು ಸುಮ್ನೆ ಬಿಡೊಲ್ಲ. ನಿಮಗೆ ಹೇಗೆ ಬುದ್ಧಿ ಕಲಿಸ್ಬೇಕು ಅನ್ನೋದು ನಂಗೊತ್ತು...''

''ಸಾರ್... ಯಾರೋ ಆಗದವ್ರು ಚಾಡಿ ಹೇಳಿದ್ದಾರೆ. ನಾನೆಲ್ಲಿ ಅವಮಾನ ಮಾಡಿದ್ದೀನಿ ಸಾರ್? ಸಕಲ ಮರ್ಯಾದೆಯೊಡನೆ ಸನ್ಮಾನ ಮಾಡಿ ಮೇಡಂನ ಈಗ್ತಾನೆ ಬೀಳ್ಕೊಟ್ಟೆ ಸಾರ್... ಏನು? ಅವ್ರಲ್ವೇ? ಏನ್ಸಾರ್ ನೀವು ಹೇಳೋದು. ನೀವು ಮೇಡಂನ ನಿಮ್ಮ ಪರವಾಗಿ ಕಳಸ್ತೀನಿ ಅಂತ ಫೋನ್ ಮಾಡಿದ ಐದು ನಿಮಿಷದಲ್ಲಿ ಆಕೆ ಒಳಗಡಿ ಇಟ್ರು. ಆಕೆ ರಾಜಾರೋಷವಾಗಿ ವೇದಿಕೆ ಏರಿ ಬಂದ್ರು!''


''ಯಾರೋ ಇಮ್‌ಪೋಸ್ಟರು ಕಣ್ರೀ. ನನ್ನ ಅಫೀಶಿಯಲ್ ಕಾರು ಅರ್ಧ ದಾರೀಲಿ ಕೆಟ್ಟು ನಿಂತಿತಂತೆ. ಮಿಸೆಸ್ಸು ಟಾಕ್ಸಿ ಏರಿ ಬಂದಳಂತೆ. ಸಭಾಂಗಣದ ದ್ವಾರಪಾಲಕ ಕಾರನ್ನು ಒಳಗೆ ಬಿಡದೆ ಕೆಟ್ಟ ಕನ್ನಡದಲ್ಲಿ 'ಜಾಕವಿಲ್ಲ' ಅಂದ್ನಂತೆ. ಈಕೆ ಇದು ಸಚಿವರ ಕಾರು ಅಂದದ್ದಕ್ಕೆ 'ಎಲ್ಲಾ ಅಪ್ಪಡಿಪ ಏಳೋವ್ರೆ,' ಎಂದು ಒಂದು ವಿಧವಾಗಿ ನಕ್ಕನಂತೆ. ನನ್ನ ಹೆಂಡ್ತಿ ಕೆಳಗಿಳಿದು ನಡೆದು ಒಳಗೆ ಬಂದರೆ ಒಬ್ರೂ ಎದಿರ್ಗೊಳ್ಳಲಿಲ್ಲವಂತೆ. ವೇದಿಕೆಯ ಬಾಗಿಲಿಗೆ ಬಂದಾಗ ಸಿಡುಕು ಮೂತಿ ಮುದುಕರೊಬ್ರು 'ಏನಮ್ಮ ಒಳಗೆ ಜಾಗ ಇಲ್ಲಾಂತ ಕಣ್ಕಾಣ್ಸೊಲ್ವ? ಹೋಗಮ್ಮ ಆಚೆ' ಅಂತ ಅಟ್ಟಿದ್ರಂತೆ.

''ಸಾರ್, ಅವ್ರೂ... ಅವ್ರೂ ಯಾರೋ ಮುದಕ್ರಲ್ಲ. ನಮ್ಮ ಸಂಘದ ಅಧ್ಯಕ್ಷರು. ತಿಳೀದೇ ಅಚಾತುರ್ಯವಾಯ್ತು...'' ಹೀಗೆ ಎಷ್ಟೊ ಹೊತ್ತು ಪಾಪದ ಪ್ರಾಣಿ ಹರಿದು ಹೋಗುತ್ತಿದ್ದ ಬೆವರು ಒರೆಸಿಕೊಳ್ಳದೆ ಪ್ಪೆ...ಪ್ಪೆ...ಪ್ಪೆ ಮಾಡುತ್ತಿದ್ದ.

ಇತ್ತ ಕಾವೇರಮ್ಮ ಪತಿಗೆ ವರದಿಯೊಪ್ಪಿಸುತ್ತಿದ್ದರು.

''ಅಬ್ಬಬ್ಬಾ. ಅದೇನು ಪಾಟ ಜನಾರೀ. ಬಾಗಿಲ ಹತ್ರ ನಿಂತಿದ್ರು ನೋಡೀ ಜನ. ವೇದಿಕೆ ಏನೇನೂ ಕಾಣ್ತಿರ್ಲಿಲ್ಲ. ಹಾಗೇ ಮುಂದೆ ಹೋಗಿ ವೇದಿಕೆಗೆ ಹೊಂದಿದ್ದ ಬಾಗಿಲ ಹತ್ರ ಹೋಗಿ ನಿಂತೆ. ಅಲ್ಲಿ ಮೂರ್ನಾಕು ಜನರ ನಡುವೆ ಒಂದೇ ಕುರ್ಚಿ ಖಾಲಿ ಇತ್ತು. ಒಬ್ರು ಎದ್ದು ಬಂದು ಕೈ ಮುಗಿದು ಬನ್ನಿ ಅಂತ ಆಹ್ವಾನಿಸಿ ಕುರ್ಚಿ ಕೊಟ್ರು. ಆ ಸಭಾಂಗಣದ ಅವಲಕ್ಷಣ ಏಷ್ಟೂಂತೀರಿ. ವೇದಿಕೆ ಮೇಲೆ ಕೂತವ್ರಿಗೆ ಮೈಕ್‌ನಲ್ಲಿನ ಮಾತುಗ್ಳು ಸುತರಾಂ ತಿಳೀತಿರ್ಲಿಲ್ಲ. ಬೊಂ... ಬೊಂ... ಅಂತ ಕೇಳಿಸ್ತಿತ್ತು. ಅದೇನು ಮಾತನಾಡಿದ್ರೊ, ಅವ್ರಿಗೇ ಗೊತ್ತು. ಮುಂದೆ ಕರೆದು ಕೂರ್ಸಿ ಶಾಲು, ಹಣ್ಣು ಹಂಪಲು, ಫಲಕ ಎಲ್ಲಾ ಕೊಟ್ರು. ಏನೋ ವ್ರತ ಮಾಡಿರ್ಬೇಕು. ಉದ್ಯಾಪ್ನೇಗೆ ಮುತ್ತೈದೇನ ಕರೆದು ಕೊಡ್ತಿದ್ದಾರೆ ಅಂದ್ಕೊಂಡೆ. ಒಟ್ನಲ್ಲಿ ಬಲು ಒಳ್ಳೇಜನ. ಎಷ್ಟು ಮರ್ಯಾದೇಂತೀರ? ಹೇಳುತ್ತಾ ಹಣ್ಣಿನ ಬುಟ್ಟಿ ಮುಚ್ಚಿದ್ದ ಬಣ್ಣದ ಕಾಗದ ತೆಗೆದರು. ''ಇದೇನ್ರೀ? ಅರ್ಧ ಹಲಸಿನ ಹಣ್ಣು, ಒಂದುಂಡೆ ಹುಣಸೇ ಹಣ್ಣಿದೆ? ಇದನ್ಯಾರಾದ್ರೂ ಕೊಡ್ತಾರಾ?'' ಕಾವೇರಮ್ಮ ಬಿದ್ದು ಬಿದ್ದು ನಕ್ಕರು.

''ಕೊಡ್ದೇ ಏನು. ಅವ್ರೆಲ್ಲಾ ಏಷ್ಟಾದ್ರೂ ಹಾಸ್ಯ ಸಾಹಿತಿಗ್ಳು. ಹಾಸ್ಯ ಸಮಾರಂಭಕ್ಕೆ ಹೋದ್ವಿ. ಮನೇ ತಲುಪಿದ ಮೇಲೂ ಇನ್ನೂ ನಗ್ತಾ ಇದ್ದೀ. ಅದೀಗ ಹಾಸ್ಯದ ಗಮ್ಮತ್ತು'' ಎಂದರು ಯಜಮಾನರು.



ಅಂತರಾತ್ಮ!?

– ಕೆ. ಚಂದ್ರಮೌಳಿ

ಅಂತರಾತ್ಮ, ಬಹಿರಾತ್ಮ, ಪರಮಾತ್ಮ ಅನ್ನಲು ಇದು ಯಾರ ಕಠಿನವಾದ ಉಪನಿಷತ್ತೂ ಅಲ್ಲ. ಇದು ಅಂತರಾತ್ಮ ಅಥವಾ ಆತ್ಮಸಾಕ್ಷಿಯ ಬಗ್ಗೆ ಎಂದಿನಿಂದಲೂ ನಡೆದು ಬರುತ್ತಿರುವ ನಿತ್ಯ ನೂತನ ಕಥೆ. ಆತ್ಮ ಎಂದು ಶುರು ಮಾಡಿದ ತಪ್ಪಿಗೆ ಕಠೋಪನಿಷತ್ತಿನ ಹಳೇ ಕಥೆಯ ಹೊಸ ರೂಪವನ್ನು ನೋಡಿ ಬಿಡಿ - ಇದನ್ನು ಬೇಕಾದರೆ ರಿಮೇಕ್ ಕಹಾನೀ ಅಥವಾ ಗಾನಾ ಅಂದರೂ ಅನ್ನಬಹುದು, ಬಹಳ ಹಿಂದೊಬ್ಬ ರಾಜ ಇದ್ದ, ವಾಜಶ್ರವಸ ಅಂತ. ಅವನ ಮಗ ನಚಿಕೇತ. ರಾಜನಿಗೆ ವಿಶ್ವಕ್ಕೇ ಒಡೆಯನಾಗುವ ಹಂಬಲ; ವಿಶ್ವಜಿತ್ ಎಂಬ ಯಾಗ ಶುರುಮಾಡಿದ. ಆ ಯಾಗದಲ್ಲಿ ಬ್ರಾಹ್ಮಣರಿಗೆ ಸಾವಿರ ಹಸುಗಳನ್ನು ಮತ್ತು ನಾಣ್ಯದ ಗಂಟುಗಳನ್ನು ದಾನ ಮಾಡಲು ಯೋಚಿಸಿದ. ಕರ್ನಾಟಕದಿಂದ ಎತ್ತಿನ ಗಾಡಿಗಳ ಹಿಂದೆ (ಈಗಿನ ಕಾಲದಲ್ಲಿ ಲಾರಿಯ ಒಳಗೆ) ಕೇರಳದ ಕಸಾಯಿ ಖಾನೆಗಳಿಗೆ ಹೊಡೆಯುತ್ತಿದ್ದ ಸಾವಿರಾರು ಬಡಕಲು ಹಸುಗಳನ್ನು ಸೇವಕರು ಯಾಗಶಾಲೆಗೆ ತಂದರು. ಮೂಳೆ - ಚಕ್ಕಳಗಳ ಹಸುಗಳನ್ನು ನೋಡಿ ಈ 'ಡೀಲ್' ನಲ್ಲಿ ಮಗ ನಚಿಕೇತನಿಗೆ ಅನುಮಾನ ಬಂತು. ತನ್ನ ಗುಪ್ತಚರರನ್ನು ಬಿಟ್ಟು ವಿಷಯ ಸಂಗ್ರಹಿಸಿದ. ರಾಜನ ಸೇವಕರು ನಡೆಸಿದ 'ಹಸುವಿನ ಸ್ಕ್ಯಾಮ್' ಬಯಲಿಗೆಳೆಯುವ ಮುನ್ನ ತಂದೆಯ ಹತ್ತಿರ ಹೋಗಿ ''ಇದೇನು, ದಾನಕ್ಕೆ ಬಡಕಲು ಹಸುಗಳೇ? ಇದಕ್ಕೆ ಖಜಾನೆಯಿಂದ ಎಷ್ಟು ಹಣ ಖರ್ಚು? ಎಷ್ಟು ಹಣ ಯಾರ್‍ಯಾರ ಜೇಬಿಗೆ ತಲುಪಿದೆ? ಇಂಥಾ ಹಗರಣ ನಡೆದರೆ ರಾಜ್ಯದ ಗತಿಯೇನು? ರಾಜರ ಮುಖಕ್ಕೆ ಸಗಣಿ ಬಳಿದ ಹಾಗಲ್ಲವೇ?'' ಎಂದೆಲ್ಲಾ ಪ್ರಶ್ನೆ ಮಾಡಿದ. ಮಗನಾದರೇನು, ರಾಜನನ್ನೇ ಪ್ರಶ್ನೆ ಮಾಡುವುದೇ? ರಾಜನ ಸಿಟ್ಟು ನೆತ್ತಿಗೇರಿತು, ಮಗನನ್ನೇ ಬೈದ. ಹಗರಣದ ಬೆನ್ನು ಹಿಡಿದ ಮಗ ಎರಡೇ ದಿನಗಳಲ್ಲಿ ತಿರುಗಿ ಬಂದು ''ಬ್ರಾಹ್ಮಣರಿಗೆ ದಾನ ಕೊಡಲು ಸಾವಿರ ಗಂಟುಗಳಲ್ಲಿ ನಾಣ್ಯ ತುಂಬಿಸಿದ್ದಿರಿ. ಆದರೆ ಈಗ ಆ ಗಂಟುಗಳಲ್ಲಿರುವುದೆಲ್ಲಾ ಸವಕಲು, ಕಿಲುಬು ನಾಣ್ಯಗಳು. ಒಳ್ಳೆಯ ನಾಣ್ಯಗಳೇನಾದವು?...'' ಎಂದು ಕೂಗಾಡಿದ. ಹಸುವಿನ ಹಗರಣ ತಣ್ಣಗಾಗುವ ಮೊದಲೇ ನಾಣ್ಯದ ಸ್ಕ್ಯಾಮ್ ಬಿಸಿಯೇರಿತ್ತು. ರಾಜ ಹೆದರಿದ, ತಬ್ಬಿಬ್ಬಾದ, ಸಿಟ್ಟಾದ.

ತಂದೆಗೆ ಮಗ ನಚಿಕೇತನ ಮೇಲೆ ವಿಪರೀತ ಸಿಟ್ಟು ಬಂತು. ಸಿಟ್ಟು ಬಂದದ್ದು ಮೂರು ಕಾರಣಗಳಿಗಾಗಿ. ಮೊದಲಾಗಿ, ರಾಜನಿಗೆ ತನ್ನ ಕಳಪೆ ಕೆಲಸದ ಬಗ್ಗೆ ಅರಿವಿತ್ತು. ಬಡಕಲ ಹಸುವೋ, ಸವಕಲ ನಾಣ್ಯವೋ ರಾಜನಿಗೆ ತಿಳಿದಿದ್ದ ವಿಷಯವೇ, ರಾಜನಿಗೆ ತಿಳಿಯದ ಹಗರಣ ಸಾಧ್ಯವೇ ಇರಲಿಲ್ಲ. ಎರಡನೆಯದಾಗಿ, ತನ್ನ ತಪ್ಪಿನ ವಿರುದ್ಧ ತನ್ನಲ್ಲೇ ಎದ್ದಿದ್ದ ಅಂತರಾತ್ಮದ - ಆತ್ಮಸಾಕ್ಷಿಯ ಧ್ವನಿಯನ್ನು ಒತ್ತಿ ಹಿಡಿದು, ಕತ್ತು ಹಿಸುಕಿ, ಇನ್ನೂ ಪಿಲಪಿಲಾ

ಅಂದಾಗ ಅದರ ಸೊಲ್ಲನ್ನು ಪೂರ್ತಿ ಅಡಗಿಸುವುದರಲ್ಲಿ ರಾಜನಿಗೆ ಸಾಕು ಸಾಕಾಗಿತ್ತು. ಮೂರನೆಯದಾಗಿ ಅಂತರಾತ್ಮನ ಸೊಲ್ಲಡಗಿಸಿ ಒಂದು ರಾತ್ರಿ ನಿಶ್ಚಿಂತೆಯ ನಿದ್ದೆ ಹೊಡೆದು ಎದ್ದಾಗ ಮಗ ನಚಿಕೇತ ಮತ್ತೆ ಅದೇ ಪ್ರಶ್ನೆಯನ್ನು ಎತ್ತಿದ್ದ. ಆತ್ಮಸಾಕ್ಷಿಯನ್ನಾದರೂ ಬಗ್ಗು ಬಡಿಯಬಹುದು, ಆದರೆ ಮಗನನ್ನು? 'ಬಡಕಲು ಹಸು ದಾನ ಮಾಡಿದರೆ ಫಲ ಬಂದೀತೇ' ಎಂದ ಮಗ. ''ಧರ್ಮಕ್ಕೆ ಹಸು ಕೊಟ್ಟರೆ ಕೆಚ್ಚಲಿಗೆ ಕೈ ಹಾಕಿ ಹಾಲು ಕರೆಯಲು ನೋಡ್ತಾರೇನೋ ಮೂಢ'' ಅಂದ ಅಪ್ಪ. 'ಸವಕಲು ಕಾಸು ದಾನ ಕೊಟ್ಟರೆ ಬ್ರಾಹ್ಮಣರು ಸಂತುಷ್ಟರಾಗುವರೇ' ಎಂದ ಮಗ. ''ದಾನಕ್ಕೆ ಕಾಳುಕೊಟ್ಟರೆ ಅದು ಜೊಳ್ಳು ಎಂದು ಕೇರಿ ನೋಡ್ತಾರೇನೋ ಮರುಳ ಹಾಗೆಯೇ ಕಾಸು ಕಿಲುಬಾದರೇನು, ಸವಕಲಾದರೇನು ಮತ್ತೆ ಅದು ಖಜಾನೆಗೇ ವಾಪಸ್ಸು ಬಂದಾಗ ನೋಡಿಕೊಳ್ಳೋಣವಂತೆ'' ಎಂದ ಅಪ್ಪ. ಏನು ಹೇಳಿದರೂ ನಚಿಕೇತನ ಪ್ರಶ್ನೆಗಳಿಗೆ ಕೊನೆಯೇ ಇರಲಿಲ್ಲ. 'ಕಲಿಯುಗದಲ್ಲಿ ನೀನು ವರದಿಗಾರನಾಗಿ ಹುಟ್ಟು' ಎಂದು ತಂದೆ ಮಗನಿಗೆ ಮನದಲ್ಲೇ ಶಾಪಕೊಟ್ಟ!

ಆಗಿನ ಕಾಲದಲ್ಲಿ ಈಗಿನಂತೆ ಕಳ್ಳಫೋನ್ (Tapping), ವಿಡಿಯೋ ಟೇಪು, ಟೆಹೆಲ್ಕಾ, ಪತ್ರಿಕಾ - ಟೀವಿ ವರದಿಗಾರರು ಏನೂ ಇಲ್ಲದಿದ್ದರೂ ಗೋಡೆಗಳಿಗೇ ಕಿವಿ ಇತ್ತಂತೆ. ಹೀಗಾಗಿ ಎರಡೇ ದಿನಗಳಲ್ಲಿ ರಾಜ್ಯದಲ್ಲೆಲ್ಲಾ ಈ ಸ್ಕ್ಯಾಮ್‌ಗಳ ಬಗ್ಗೆ ಗುಸುಗುಸು ಹರಡಿತು. ಇನ್ನು ಹೀಗೆಯೇ ಬಿಟ್ಟರೆ ತನ್ನ ಮಗನಿಂದಲೇ ತನ್ನ ಸಿಂಹಾಸನ ಮುಳ್ಳಾಸನ ಆಗಿಬಿಡುತ್ತದೆ ಅನಿಸಿತು ತಂದೆಗೆ. ಬುಡಕ್ಕೆ ಮುಳ್ಳು ಚುಚ್ಚಿದರೂ ಪರವಾಗಿಲ್ಲ, ತಲೆ ಮೇಲೆ ತೂಗುತ್ತಿರುವ ಕತ್ತಿಯ ದಾರವನ್ನು ಮಂತ್ರಿಯೋ, ಸೈನ್ಯಾಧಿಪತಿಯೋ ಕತ್ತರಿಸಿಬಿಟ್ಟರೆ ಎಂದು ರಾಜ ಹೆದರಿದ. ತಕ್ಷಣ ಏನನ್ನಾದರೂ ಮಾಡಲೇಬೇಕಿತ್ತು. ರಾಜ ಜರ್ಬಿನಿಂದ ಅಬ್ಬರಿಸಿದಾಗ ದನಿ ಕೂತಿತು. ಏನು ಮಾಡಲೂ ತಿಳಿಯದೆ ಬೇಸತ್ತಾಗ ಬುದ್ಧಿ ಮಂಕಾಯಿತು. ಕೊನೆಗೆ 'ಲೇ ಮಗನೇ, ನೀ ಎಲ್ಲಾದರೂ ತೊಲಗಿ ಹೋಗು, ಇಲ್ಲವೆ ಸತ್ತೇ ಹೋಗು' ಎಂದು ಸಿಟ್ಟಿನಿಂದ ಗರ್ಜಿಸಿದ. ರಾಜ ಮನಸ್ಸು ಬದಲಾಯಿಸುವುದರೊಳಗೆ ಕೆಲಸ ಮುಗಿದು ಬಿಡಲಿ ಎಂದು ಮಂತ್ರಿಗಳು ಸನ್ನೆ ಮಾಡಿದರು. ರಾಜಧೂತರು ನಚಿಕೇತನನ್ನು ಹಿಡಿದು ನೇರ ಯಮಲೋಕಕ್ಕೆ ಕಳಿಸಿಯೇ ಬಿಟ್ಟರು! ಯಮಲೋಕದಲ್ಲಿ ನಚಿಕೇತನಿಗೆ ಯಮ ಮೂರು ವರ ಕೊಟ್ಟ, ಆತ್ಮನ ಬಗ್ಗೆ, ಅಂತರಾತ್ಮನ ಬಗ್ಗೆ, ತಿಳಿ ಹೇಳಿದ ಎನ್ನುವುದೆಲ್ಲಾ ಮುಂದಿನ ಕಥೆ. ಅವೆಲ್ಲಾ ಇಂದಿನವರಿಗೆ ಅರ್ಥವಾಗುವುದಿಲ್ಲ, ಬೇಡವೂ ಬೇಡ. ನಮಗರ್ಥವಾಗುವುದು ಇಷ್ಟೇ - ಅಂದೂ 'ಅಂತರಾತ್ಮನಿಗೆ ಆಸ್ಪದವಿರಲಿಲ್ಲ' ಇಂದೂ ಈ ಕಲಿಯುಗದಲ್ಲೂ ಆಸ್ಪದವಿಲ್ಲೇ ಇಲ್ಲ ಅನ್ನುವ ಸತ್ಯ. ಹಾಗಾದರೆ ಅಂದಿಗೂ - ಇಂದಿಗೂ ವ್ಯತ್ಯಾಸವೇ ಇಲ್ಲವೇ?

ಹಳೇಕಾಲದ ರಾಜನ ರಾಜ್ಯಕ್ಕೂ ಇಂದಿನ ಮಾಡರ್ನ್, ಪ್ರೊಗ್ರೆಸೀವ್, ಸೆಕ್ಯುಲರ್ ಆದ ಪ್ರಜಾಪ್ರಭುತ್ವಕ್ಕೂ ಇರುವ ಹೋಲಿಕೆ - ವ್ಯತ್ಯಾಸಗಳನ್ನು ನೋಡಿ. ರಾಜ್ಯ ನಡೆಸುವ ಕಸರತ್ತು ಎರಡರಲ್ಲೂ ಒಂದೇ. ಬರಗಾಲ - ಪ್ರವಾಹ, ನೆರೆ ರಾಜನ ದಾಳಿ, ಒಳ

ಶತ್ರುಗಳ ಭಯ, ಒಳಗೇ ಮಸಲತ್ತು - ಪಿತೂರಿ ನಡೆಸುವ ಅಧಿಕಾರಿಗಳು, ನವ ವಿಧ ಶಾಂತಿಗಾಗಿ ಹೋಮ, ಹವನಾದಿಗಳನ್ನು ನಡೆಸುವ ಹವಣಿಕೆಯಲ್ಲಿ ತಪಿಸುವ ಋಷಿಗಳು, ಕೊನೆಯದಾಗಿ ಬಡಪಾಯಿ ಜನಗಳು... ತಲೆನೋವು ಒಂದೇ ಎರಡೇ! ಇಂದು ಸೆಕ್ಯೂಲರ್ ರಾಜ್ಯವಾದ್ದರಿಂದ ಹೋಮಗಳ ಬದಲಾಗಿ ಸರ್ಕಾರೀ ಈದ್ ಮಿಲಾದ್, ಹೋಲೀ ಮಿಲನ್, ಇಫ್ತಕಾರ್ ಪಾರ್ಟಿ, ಡಿಪ್ಲೊಮ್ಯಾಟಿಕ್ ಭೋಜನಗಳು ನಡೆಯುತ್ತವೆ. ಈ ಕಾರ್ಯ-ಯೋಜನೆಗಳಿಗೆಲ್ಲಾ ಖಜಾನೆ ತುಂಬಿರಬೇಕು. ನವರತ್ನ - ವಜ್ರ-ವೈಡೂರ್ಯಗಳು, ಚಿನ್ನದ ನಾಣ್ಯಗಳು, ಬೆಳ್ಳಿಯ ಬಿಡಗುಗಳು, ತಾಮ್ರದ ಕಾಸು, ನವಕಲು-ಕಿಲುಬಿನ ಕಾಸುಗಳು, ಹೊಳೆಯುವ, ಬಿಳುಪಿನ, ಕಪ್ಪಿನ... ಎಲ್ಲಾ ಬಣ್ಣದ ಹಣವೂ ಖಜಾನೆಯನ್ನು ಸೇರಬೇಕು. ಹಿಂದೆ ಎಲ್ಲವೂ ಖಜಾನೆ ಸೇರುತ್ತಿತ್ತು. ಆದರೆ ಇಂದಿನ ಪ್ರಜಾ ರಾಜ್ಯದಲ್ಲಿ ಬಿಳಿ - ಕಪ್ಪು ಹಣ ಎಂದು ವೈಜ್ಞಾನಿಕವಾಗಿ ಎರಡು ವರ್ಗ ಮಾಡಿದ್ದಾರೆ. ಆನಂತರ ಖಜಾನೆ ಹಣ, ಪಾರ್ಟಿಫಂಡು, ಪ್ರೈವೇಟ್ ಫಂಡು, ಎಂದು ರಾಜಕೀಯವಾಗಿ ವಿಂಗಡಿಸಿದ್ದಾರೆ. ಈ ವಿಂಗಡನೆ ರಾಜನ ರಾಜ್ಯದಲ್ಲಿ ಕಂಡು ಬರುವುದಿಲ್ಲ, ಅಲ್ಲಲ್ಲಿ ಅಧಿಕಾರಿಗಳು ಜೇನುಗೂಡಿಗೆ ಕೈ ಹಾಕಿ ಹಿಂಗೈ ನೆಕ್ಕಿಕೊಂಡರೂ ಸಿಂಹಪಾಲು ಖಜಾನೆ ಸೇರುತ್ತಿತ್ತು ಅಂತಾರೆ(?) ಈಗಿನ ಪ್ರಜಾ ರಾಜ್ಯದಲ್ಲಿ ಈ ಸಿಸ್ಟಮ್ಮೇ ಬದಲಾಗಿದೆ. ಇಲ್ಲಿ ಪ್ರತಿಯೊಬ್ಬ ಪ್ರಜೆಯೂ ಒಬ್ಬ ಭಾವೀ (potential) ರಾಜನೇ ಸರಿ. ಕಂಡದ್ದನ್ನು ಬಾಚುವ, ಯುಕ್ತಿಯಿಂದ ಗಿಟ್ಟಿಸುವ, ಶಕ್ತಿಯಿಂದ ದೋಚುವ, ಧೂರ್ತತನದಿಂದ ಕಸಿಯುವ, ಭಕ್ತಿಯಿಂದ ಬೇಡುವ ಎಲ್ಲಾ ಪ್ರಜೆಯೂ ಒಂದೊಲ್ಲೊಂದು ದಿನ ರಾಜನಾಗಿ ಮೆರೆಯಬಲ್ಲ. ಸಿಕ್ಕ ಅವಕಾಶವನ್ನು ಉಪಯೋಗಿಸಿಕೊಳ್ಳುವ ಚಾಕಚಕ್ಯತೆಯೊಂದು ಬೇಕು, ಅಷ್ಟೆ.

ಆದರೆ ರಾಜನ ಆಡಳಿತದಲ್ಲೂ, ಪ್ರಜಾಪ್ರಭುತ್ವದಲ್ಲೂ ಒಂದು ಮಾತನ್ನು ನೆನಪಿಡಬೇಕು. ಈ ಬಾಚುವ, ಗಿಟ್ಟಿಸುವ, ದೋಚುವ, ಕಸಿಯುವ, ಬೇಡುವ ಎಲ್ಲಾ ವಿಧಾನಗಳಲ್ಲೂ ಆತ್ಮಸಾಕ್ಷಿಗೆ, ಅಂತರಾತ್ಮಕ್ಕೆ ಅವಕಾಶವೇ ಇರುವುದಿಲ್ಲ. ಹಾಗೇನಾದರೂ ಅಂತರಾತ್ಮಕ್ಕೆ ಉತ್ತರ ಹೇಳಲೇಬೇಕೆನಿಸಿದರೆ, ನೇರವಾಗಿ ಯಮಲೋಕಕ್ಕೆ ಹೋಗಿ ಅಲ್ಲಿ ಉತ್ತರವನ್ನು ಪಡೆಯಬೇಕಾಗುತ್ತದೆ - ನಚಿಕೇತನಂತೆ. ನಚಿಕೇತನಿಗೆ ಉತ್ತರ ಪಡೆದು, ಯಮಲೋಕದಿಂದ ತಿರುಗಿ ಬರುವುದು ಸಾಧ್ಯವಾಯಿತು - ಹಾಗಂತ ಒಪ್ಪಿಕೊಳ್ಳೋಣ. ನಮಗೂ ನಿಮಗೂ ಇದು ಸಾಧ್ಯವೇ? ಸಾಧ್ಯವಾಗದ್ದಕ್ಕೆ ಮೈಕೈ ಪರಚಿಕೊಂಡರೆ ಏನು ಬಂತು ಅಂತಾರೆ ಇಂದಿನ ರಾಜಕೀಯ ಮುತ್ಸದ್ದಿಗಳು. ರಾಜಕೀಯ ಎಂಬ ಶಬ್ದ ಬಂದಿದ್ದೇ ರಾವಣ, ಜರಾಸಂಧ, ಕೀಚಕ ನಂತಹ ಮುತ್ಸದ್ದಿಗಳಿಂದ ಅಂತಾರೆ. ಹಾಗಾದಾಗ ಆತ್ಮಸಾಕ್ಷಿ 'ಯಾ' ಅಂತರಾತ್ಮ ಸೊಲ್ಲೆತ್ತುವುದಿರಲಿ, ಉಸಿರಾಡಲೂ ಆಸ್ಪದವಿಲ್ಲ! ಇನ್ನು ಅಂತರಾತ್ಮನಿಲ್ಲದ ನಾವೆಲ್ಲರೂ ನಿಶ್ಚಿಂತೆಯಿಂದ ನಿದ್ದೆ ಹೋಗಬಹುದು!!

ಎಲ್ಲಾ ನವ್ಯ - ನವೀನ!

- ಮಣಿ

ಹಿಂದಿನ ಕಾಲದಲ್ಲಿ ಮಕ್ಕಳಿಗೆ ಹಿರಿಯರ ಅಂದರೆ ತಾತ-ಮುತ್ತಾತ-ಅಜ್ಜಿ-ಮುತ್ತಜ್ಜಿಯರ ಹೆಸರುಗಳನ್ನಿಡುತಿದ್ರು. ಕಾರಣ - ಹಿರಿಯರ ಸ್ಮರಣೆ ಸದಾ ಇರಲಿ ಎಂದು - ಮತ್ತೆ ಮಕ್ಕಳು ಅವರ ಹಾಗೇ ವಿದ್ಯಾವಂತರು - ಬುದ್ಧಿವಂತರು - ಕೀರ್ತಿವಂತರು ಹಾಗೂ ದೀರ್ಘಾಯುಗಳೂ ಆಗಲಿ ಎಂದು.

ಆದ್ರೆ - ತಮ್ಮ ತಮ್ಮ ಮನೆ ದೇವರುಗಳ ಹಾಗೂ ಇತರ ದೇವರುಗಳ ಹೆಸರುಗಳನ್ನಿಡುವ ಸಂಪ್ರದಾಯವೇ ಹೆಚ್ಚಾಗಿತ್ತು - ವೆಂಕಟೇಶ್ವರ - ರಾಮಚಂದ್ರ - ಶಂಕರ - ಲಕ್ಷ್ಮಿ - ಸೀತ - ಪಾರ್ವತಿ - ಲಕ್ಷ್ಮಿನರಸಿಂಹ - ನಂಜುಂಡ ಇತ್ಯಾದಿ.

ಆ ಮಗು ಹುಟ್ಟುವುದಕ್ಕೆ ಸ್ವಲ್ಪ ಮುಂಚೆ ಆ ದಂಪತಿಗಳು ಪುಣ್ಯಕ್ಷೇತ್ರಗಳಿಗೇನಾದ್ರೂ ಹೋಗಿ ಬಂದಿದ್ರೆ. ಆಯಾ ಕ್ಷೇತ್ರಗಳ ಅಧಿ ದೇವತೆಗಳ ಹೆಸರುಗಳನ್ನಿಡುವ ಪದ್ಧತಿಯೂ ಇತ್ತು - ಶ್ರೀನಿವಾಸ - ವಿಶ್ವೇಶ್ವರ - ವಿಶಾಲಾಕ್ಷಿ - ಕೃಷ್ಣಮೂರ್ತಿ ಹೀಗೆ. ಮತ್ತೆ ಅಹಲ್ಯ - ತಾರ - ಸಾವಿತ್ರಿ ಮುಂತಾದ ಪತಿವ್ರತೆಯರ - ಗಂಗ - ತುಂಗ - ಕಾವೇರಿ ಮುಂತಾದ ನದಿಗಳ ಹೆಸರುಗಳನ್ನಿಡುವುದೂ ರೂಢಿಯಲ್ಲಿತ್ತು. ನಂತರ - ಜಲಜ - ವನಜ ಇತ್ಯಾದಿ ಜಕಾರಾಂತ ಸ್ತ್ರೀಲಿಂಗ ನಾಮಗಳೂ - ವನಜಾಕ್ಷಿ - ಜಲಜಾಕ್ಷಿ ಇತ್ಯಾದಿ 'ಅಕ್ಷಿ' ನಾಮಗಳೂ ಚಾಲ್ತಿಯಲ್ಲಿದ್ದುವು.

ನಾಗ ಪ್ರತಿಷ್ಠೆ ಮಾಡಿದ ನಂತರ ಮಗುವಾಗಿದ್ದರೆ - ನಾಗರಾಜ - ನಾಗಲಕ್ಷ್ಮಿ ಇತ್ಯಾದಿ ನಾಗದೇವತೆಗಳ ಹೆಸರುಗಳಿಗೇ ಪ್ರಧಾನತೆ ಇತ್ತು.

ಲಕ್ಷ್ಮಿಗೆ ಮಾತ್ರ ಬಹುರೂಪ ನಾಮಗಳಿದ್ದುವು. ಉದಾಹರಣೆಗೆ ಧನಲಕ್ಷ್ಮಿ - ಭಾಗ್ಯಲಕ್ಷ್ಮಿ - ವೆಂಕಟಲಕ್ಷ್ಮಿ - ಸುಬ್ಬಲಕ್ಷ್ಮಿ ಇತ್ಯಾದಿ. ಎಷ್ಟೇ ಆಗ್ಲಿ ಆಕೆ ಐಶ್ವರ್ಯದ ಅಧಿದೇವತೆ ಅಲ್ವೇ? - ಅದಕ್ಕೇ ಹೆಚ್ಚು ಇಂಪಾರ್ಟೆನ್ಸು.

ಹಳೆಯ ಕಾಲ ಹೋಯ್ತು - ಆಧುನಿಕ ಕಾಲ ಬಂತು - ಅತ್ಯಾಧುನಿಕ ಕಾಲವೂ ಬಂತು. ಎಲ್ಲಾ ನವ ನವೀನ ಆಯ್ತು. ಹೆಸರುಗಳೂ ಕೂಡ ಅತ್ಯಾಧುನಿಕ - ಅತಿ ನವೀನ - ಆಶ್ಚರ್ಯ - ಅಪರೂಪ ಆಯ್ತು. ಹಾಗೇ ಅದೊಂದು ಫ್ಯಾಷನ್ನೂ ಆಯ್ತು. ಆಕಾಶ - ಸಾಗರ - ಅರ್ಚನ - ಪ್ರಾರ್ಥನ - ಆಪೋಶನ - ಆವಾಹನ - ವಿಸರ್ಜನ ಹೀಗೆ.

ಕ್ರಮೇಣ ಇನ್ನೊಂದು ಫ್ಯಾಷನ್ನು ಬಂತು.

ವರಸೆಯಾಗಿ ಮಕ್ಕಳಾದ್ರೆ ಒಂದೇ ತರ ಪ್ರಾಸಬದ್ಧವಾದ ಹೆಸರಿಡುವುದು.

ಉಮೇಶ - ರಮೇಶ - ಭಮೇಶ - ಹರೀಶ - ನರೀಶ - ಜಗ್ಗೇಶ - ನುಗ್ಗೇಶ - ನವ್ಯ - ದಿವ್ಯ - ಭವ್ಯ - ಅಂಕಿತ - ಶಂಕಿತ - ರಕ್ಷಿತ - ಭಕ್ಷಿತ - ರೂಪ - ಅಪರೂಪ - ದರ್ಪಣ - ಅರ್ಪಣ - ಇತ್ಯಾದಿ.

ತಮ್ಮಣ್ಣನ ಮಿತ್ರರೊಬ್ಬರಿಗೆ ಒಂದು ಮಗು ಆಯ್ತು - ಹೆಣ್ಣು -

''ಮಗು ಬಲು ಮುದ್ದಾಗಿದೆ ಕಣೆ ಸರೋಜ - ಕಣ್ಣು - ಮೂಗು - ಬಾಯಿ ನೇರವಾಗಿದೆ. ತಲೆ ತುಂಬ ಕಪ್ಪಗೆ ಕೂದಲು - ದೃಷ್ಟಿ ಬಡಿಯೋ ಹಾಗಿದೆ. ದೊಡ್ಡೋಳಾದ್ಮೇಲೆ ಸಿನಿಮಾ ಸ್ಟಾರ್ ಆಗ್ತಾಳೆ - ನೋಡ್ತಾ ಇರು - ನನ್ಮಾತು.''

ದೊಡ್ಡೋರು ಅದರಲ್ಲೂ ಸ್ವಂತ ಅಜ್ಜಿ - ಅವ್ರ ಬಾಯಲ್ಲಿ ಬಂದಿದೆ ಒಳ್ಳೇ ಮಾತು. ಸಂತೋಷವಾಯ್ತು - ಸರೋಜಮ್ಮನಿಗೆ.

''ಎಲ್ಲಾ ನಿಮ್ಮಾಶೀರ್ವಾದ. ಏನು ಹೆಸರಿಡೋಣ ಅತ್ತೆ - ಮಗೂಗೆ?''

''ಸೌಂದರ್ಯ ಅಂತ ಇಡೋಣ'' - ಹೇಳಿದ್ರು ಅಜ್ಜಿ ಸುಂದರಮ್ಮನವರು

ಮೊದಲನೇ ಮಗು ಸೌಂದರ್ಯ - ಆಯ್ತು.

ಒಂದೆರಡು ವರ್ಷ - ಇನ್ನೊಂದು ಮಗು ಆಯ್ತು - ಹೆಣ್ಣು

ಈ ದಂಪತಿಗಳಿಗೂ ''ಪ್ರಾಸದ'' ಹುಚ್ಚಿತ್ತು.

ಈ ಮಗು ಬಲಗೈ ಮುಷ್ಟಿಯನ್ನು ಬಿಗಿಯಾಗಿ ಹಿಡಿದುಕೊಂಡೇ ಹುಟ್ಟಿತ್ತು. ಏನು ಮಾಡಿದ್ರೂ ಬಿಡಿ ಸೋಕಾಗ್ತಾ ಇರ್ಲಿಲ್ಲ.

''ನೀಂಗೊ ರೊಂಬ ಅದೃಷ್ಟಸಾಲಿ ಸರೋಜಮ್ಮಾಳ್‌ರವರೇ - ನಿಮ್ಮ ಕುಳಂದೆ ಮಗಾ ಪಾಕ್ಯ ಸಾಲಿ - ಪೊಯ್ಯಾಗೋದಿಲ್ಲೆಯೆನ್ ಪೇಸು. ಅಂದ ಕೈಮುಷ್ಟಿ ಪಾರುಂಗೋ - ಯೆಪ್ಡಿ ಪಿಗಿಯಾಗಿ ಪುಡುಚಿಕೊಂಡಿರ್‍ಕಿರ್‍ದಿ. ಪಾಕ್ಯಲ ಲಕ್ಷ್ಮಿ ಅಪ್ಡಿಯೇ ವಂದು ಪೀಳುತ್ತೆ ನಿಮ್ಮ ವೀಟಿಕ್ಕಿ - ಆನಾಲ್ ವೊರಕ್ಕೆ ವೋಕುವುದೇಯಿಲ್ಲೆ. ಜಯನಗರತ್ಲೆ ರೆಂಡು ರೆಂಡು ಬಂಗ್ಲಾ - ಜೆ.ಪಿ. ನಗರತ್ಲೆ ನಾಲು ಸೈಟು - ವೀಟು - ವಾಸಲ್ - ಮೊಡ್ವೆ - ಕಾರು - ಪಾತ್ಕೊಂಡಿರುಂಗೋಯೆನ್ ಪೇಸು.''

ಪೂಜೆ - ವ್ರತ - ನೇಮ - ನಿಷ್ಠೆ - ಪ್ರತಿದಿನ ಲಲಿತಾ ಸಹಸ್ರನಾಮ - ವಾರಕ್ಕೆರಡು ದಿನ ಉಪವಾಸ - ದೊಡ್ಡ ಮುತ್ತೈದೆ - ಮಾತು. ಹರಕೆ - ಅದೂ ಶುಕ್ರವಾರ - ಆನಂದವಾಯ್ತು ಸರೋಜಮ್ಮನಿಗೆ.

''ಹೌದಾ? - ನಿಮ್ಮಾಶೀರ್ವಾದ ಧನಾಂಬಾಳ್‌ರವರೇ. ನೋಡ್ರೀ - ನಮ್ಮ ಮೊದಲ್ನೇ ಮಗುವಿನ ಹೆಸರಿನಂಥಾದ್ದೇ ಒಂದು ಹೆಸರು ಹೇಳ್ರೀ ಈ ಮಗೂಗೆ.''

''ಅಯ್ಯೋ, ಅದಕ್ಕೇನ್ನಾ ಯೋಚ್ನೆ ಸರೋಜಮ್ಮಾಳ್‌ರವರೇ. ವುಂಗಳ್ ಮೊದಲಾವದು ಮಕುಪೇರು ಸೌಂದರ್ಯ ಅಲ್ವಾ? ಯಿದಕ್ಕು ಐಸ್ವರ್ಯ ಅಂತ ವೆಚ್ಚೂಡುಂಗೋ. ಯೆಪ್ಡಿಯೂಂ ಯಿನ್ರು ಸುಕ್ರಕಳಮೈ - ನಲ್ಲನಾಳು - ಮಕೂಕು ನಲ್ಲದಾಗುಟ್ಟುಂ.''

ಎರಡನೇ ಮಗು ಐಶ್ವರ್ಯ ಆಯ್ತು.

ಇನ್ನೊಂದೆರಡು ವರ್ಷ - ಇನ್ನೊಂದು ಮಗು ಆಯ್ತು - ಅದೂ ಹೆಣ್ಣು.

ಮಗು ಮುದ್ದಾಗಿತ್ತು - ಲಕ್ಷಣವಾಗಿತ್ತು. ಆದ್ರೆ ಅಳೋದೂ ಇಲ್ಲ - ನಗೋದೂ ಇಲ್ಲ - ಕೈಕಾಲೂ ಆಡಿಸೋದಿಲ್ಲ - ಎಲ್ಲೋ ದೃಷ್ಟಿ - ಎಲ್ಲೋ ನೋಟ.

''ಏಮಂಡೀ ಸರೋಜಮ್ಮಗಾರೂ - ಮೀರು ಎಂತ ಪುಣ್ಯಾತ್ಮುರಾಲಂಡೀ! ಮೀ ಅಮ್ಮಾಯಿ ಚಾಲಾ ಅದೃಷ್ಟವಂತುರಾಲಂಡಿ. ಅಸಲು ಆ ಮೊಹಂ ಚೂಸಾರಾ - ಎಂತ ಕಳಗಾವುಂದಿ? ಏಮಿ ಪ್ರಸನ್ನತ! ವಂತ ಪ್ರಶಾಂತಂ! ಅಮ್ಮವಾರಿ 'ಪ್ರಸನ್ನವದನಾರವಿಂದಂ' ಲಾಗಾವುಂದಿ। ಅಸಲು ಇಪ್ಪುಡೇ ಏದೋ ಆಲೋಚಿಸ್ತೂವುಂಡೇ ಲಾಗ ಉಂದಿ. ಮೀ ಅಮ್ಮಾಯಿ ಪೆರುಗುತೂ ಪೆರುಗುತೂ ಗೊಪ್ಪ ವಿದ್ವಾಂಸುರಾಲೋ - ಉಪನ್ಯಾಸಕು ರಾಲೋ-ಲೇದಾ ಮಹಾವೇದಾಂತಿನೋ ಕಾಬೋಲು, ನಾಮಾಟ ನಮ್ಮಂಡಿ. ಆ ಮೊಹಂ ಎಂತ ಗಂಭೀರಂಗಾವುಂದಿ ಚೂಡಂಡಿ!''

ಒಳ್ಳೇ ಮನಸ್ಸು - ಒಳ್ಳೆ ಹೃದಯ ಒಳ್ಳೆಗುಣ ಸ್ವಭಾವಗಳು - ಅಪಾರ ದೈವಭಕ್ತಿ - ಹಿರಿಯ ಮುತ್ತೈದೆ - ಮಾತು - ಹರಕೆ - ಸರೋಜಮ್ಮನಿಗೆ ಬಹಳ ಸಂತೋಷವಾಯ್ತು.

ಏನೋ ನಿಮ್ಮಾಶೀರ್ವಾದ ವೆಂಕಟಲಕ್ಷ್ಮಮ್ನೋರೇ - ಅಂದ್ಹಾಗೆ - ನಮ್ಮ ಮೊದಲ್ನೇ ಎರಡು ಮಕ್ಕಳ ಹಸರಿವೆಯಲ್ಲಾ ಅದೇ ತರ ಒಂದು ಹೆಸರು ಹೇಳ್ರೀ ಈ ಮಗೂಗೆ.''

''ಆಂ! ದಾನಿಕೇಮಂಡಿ - ಅನ್ನಮ್ಮ - ಮೀ ಮೊದಮೋ ಅಮ್ಮಾಯಿ ಸೌಂದರ್ಯ - ರೆಂಡವ ಅಮ್ಮಾಯಿ ಐಶ್ವರ್ಯ ಕಮಾ? ಏಲಾಗೂ ಈ ಅಮ್ಮಾಯಿ ಮೊಹಂ ಆ ಮಹಾತಲ್ಲಿ ಶ್ರೀಮಾತಾ ಕನಕ ದುರ್ಗಮ್ಮ ಗಂಭೀರ ವದನಂ ಲಾಗೇ ಉಂದಿ. ಗಾಂಭೀರ್ಯ ಅನಿ ಪೆಟ್ಟಂಡಿ. ಈ ರೋಜು ದಶಮಿ - ಚಾಲಾ ಮಂಚಿ ರೋಜಂಡಿ - ಆ ಮಹಾ ತಲ್ಲಿ ಬಾಗ ಕಾಪಾಡ್ತುಂದಿ'' ಸೂಚಿಸಿದ್ರು ಶ್ರೀಮತಿ ವೆಂಕಟಲಕ್ಷಮ್ಮ ವೆಂಕಟಗಿರಿ ವೆಲ್ಲಾಲ ವೆಂಕಟಾಚಲಪತಿ ರಾವ್‌ಗಾರು. ಮೂರನೆ ಮಗು ಗಾಂಭೀರ್ಯ ಆಯ್ತು.

ಇನ್ನೊಂದೆರಡು ವರ್ಷ - ಇನ್ನೊಂದು ಮಗು ಆಯ್ತು - ಅದೂ ಹೆಣ್ಣು.

ಈ ಮಗುವೂ ಮುದ್ದಾಗಿತ್ತು. ಆದ್ರೆ - ಹಸಿವಾದ್ರೆ ಅಳು - ಹೊಟ್ಟೆ ತುಂಬಿದ್ರೆ ಅಳು - ಎತ್ಕೊಂಡ್ರೆ ಅಳು - ಮಲಗಿಸಿದ್ರೆ ಅಳು. ಯಾವಾಗ್ಲೂ ಅಳು - ಎಲ್ಲಾದಕ್ಕೂ ಅಳು.

''ನಿಮ್ಮಗು ಎಷ್ಟು ಸ್ವೀಟಾಗಿ ಅಳುತ್ತೆ ಆಂಟೀ? ಮಗು ಎಷ್ಟು ಸ್ವೀಟಾಗಿದ್ಯೋ ಅದರ ವಾಯ್ಸೂ ಅಷ್ಟೇ ಸ್ವೀಟಾಗಿದೆ - ನಿಜವಾಗ್ಲೂ ಗೋಲ್ಡನ್‌ವಾಯ್ಸು. ಒಳ್ಳೇ ಫ್ಯೂಚರ್ ಇದೆ ಅವ್ಳಿಗೆ. ದೊಡ್ಡೋಳಾದ್ಮೇಲೆ - ಯಂ.ಯಸ್.ಯಸ್ಸೋ - ಯಂ.ಯಲ್.ವೀನೋ - ಲತಾ ಮಂಗೇಶ್ಕರ್ರೋ ಆಗ್ತಾಳೆ - ಡೆಫೆನಟ್ಟು - ನೋಡ್ತಾ ಇರಿ - ನನ್ಮಾತು. ನನ್ಗಂತೂ ಆ ಅಳು ಕೇಳೋಕೆ ಬಲು ಇಷ್ಟ ಆಂಟಿ. ನನ್ಗೆ ಅಂಥಾ ಕಂಠ ಇಲ್ಲಾಂತ ಸಂಕಟಾನೂ ಆಗುತ್ತೆ. ಜಲಸೀನೂ ಆಗುತ್ತೆ.'' ಗೋಲ್ಡನ್ ವಾಯ್ಸು! ಯಂ.ಯಸ್-ಯಸ್ಸೋ - ಯಂ.ಯಲ್.ವೀನೋ - ಲತಾಮಂಗೇಶ್ಕರ್ರೋ ಆಗ್ತಾಳೆ! ಮ್ಯೂಸಿಕ್ ಸ್ಟೂಡೆಂಟೇ ಹೇಳಿದ್ದಾಳೆ.

ಸರೋಜಮ್ಮನಿಗೆ ಆದ ಸಂತೋಷ ಅಷ್ಟಿಷ್ಟಲ್ಲ.

''ಬಹಳ ಥ್ಯಾಂಕ್ಸಮ್ಮ ಸಂಗೀತ. ನೋಡಿ ನೀನು ಈಗಿನ ಕಾಲ್ದೋಳು - ನಮ್ಮ ಮೊದಲನ್ನೇ ಮೂರು ಮಕ್ಕಳ ಹೆಸರಿವೆಯಲ್ಲಾ ಅಂತಾದ್ದೆ ಒಂದು ಹೆಸರು ಹೇಳ್ತೀಯಾ ಈ ಮಗೂಗೆ?''

''ಓ ಯಸ್ - ಅದಕ್ಕೇನಂತೆ ಆಂಟಿ? ನೋ ಪ್ರಾಬ್ಲಂ'' ಎಂದು ತನ್ನ ಮೂಗಿನ ಮೇಲೆ ಬಲಗೈಯ ತರ್ಜನಿ ಬೆರಳನ್ನಿಟ್ಟು ಆದಿ ತಾಳದಲ್ಲಿ ಎರಡು ಸಲ ತಟ್ಟಿ - ಅದೇ ಬೆರಳನ್ನು ತನ್ನ ಬಾಯಿಯ ಹತ್ತಿರ ತಂದು ರೂಪಕ ತಾಳದಲ್ಲಿ ಎರಡು ಸಲ ತಟ್ಟಿ - ಒಂದು ಕ್ಷಣ ದಿವ್ಯ ಧ್ಯಾನದಲ್ಲಿ ಕುಳಿತು -

''ಓ.ಕೆ. - ವೆರಿಗುಡ್ - ಫ್ಲಾಷ್ ಆಯ್ತು ಆಂಟಿ - ಫಸ್ಟ್‌ಕ್ಲಾಸ್ ಅಪ್‌ಟುಡೇಟ್ ನೇಮು - ಆಪ್ಟಾಗೂ ಇದೆ. ಮಗು ಬ್ಯೂಟಿಫುಲ್ಲಾಗಿದೆ - ವಾಯ್ಸೂ ಮೆಲೋಡಿಯಸ್ಸಾಗಿದೆ - ಐಮೀನ್ ಮಧುರವಾಗಿದೆ - ಮಾಧುರ್ಯ ಅಂತ ಇಡಿ ಆಂಟೀ. ಬೈದಿಬೈ ನಮ್ಮ ಮ್ಯೂಸಿಕ್ ಮ್ಯಾಮ್‌ನ ಹೆಸರೂ ಅದೇ.''

ಅಷ್ಟೇ ಮಧುರ ಕಂಠದಿಂದ ಪಲುಕಿದ್ಳು - ಪಕ್ಕದ್ಮನೆ ಪದ್ದಮ್ನೋರ ಪುತ್ರಿ - ಅದೇ ತಾನೇ ಮಾಯಾ ಮಾಳವ ಗೌಳ ಮುಗಿಸಿ - ''ಲಂಬೋದರ'' ದಿಂದ ''ಕೆರೆಯ ನೀರನು ಕೆರೆಗೆ ಚೆಲ್ಲಿ'' - ವರೆಗೆ ಬಂದಿದ್ದ - ಸಂಗೀತ ವಿದ್ಯಾರ್ಥಿನಿ - ಅಡ್ವಾನ್ಸ್ ಸಂಗೀತ ವಿದುಷಿ - ಕುಮಾರಿ ಸಂಗೀತ ಕುಲಕರ್ಣಿ.

ನಾಲ್ಕನೇ ಮಗು - ಮಾಧುರ್ಯ ಆಯ್ತು.

ದಂಪತಿಗಳು ಸಂತೋಷವಾಗಿದ್ರು - ಹಾಯಾಗಿದ್ರು. ಮುಂದಾಲೋಚನೇನೂ ಇಲ್ಲ - ಮುನ್ನೆಚ್ಚರಿಕೇನೂ ಇಲ್ಲ.

ನಾಲಕ್ಕು ವರ್ಷ ಆಯ್ತು. ಮಧ್ಯಮಾವತಿಯಲ್ಲಿ ಮುಕ್ತಾಯವಾಗಿದ್ದ ಕಚೇರಿ ಮತ್ತೆ ಹಂಸಧ್ವನಿಯಲ್ಲಿ ಪ್ರಾರಂಭಾಯ್ತು. ಇನ್ನೊಂದು ಮಗು ಆಯ್ತು - ಅದೂ ಹೆಣ್ಣು.

ಈ ಸಾರಿ ಅದೇತರ 'ಪ್ರಾಸಬದ್ಧ'ವಾದ ಹೆಸರು ಆ ದಂಪತಿಗಳಿಗೂ ಹೊಳೆಯಲಿಲ್ಲ - ಅವರ ಬಂಧು ಮಿತ್ರರಿಗೂ ತೋಚಲಿಲ್ಲ.

ಸರೋಜಮ್ಮನ ಯಜಮಾನ್ರಿಗೆ ಒಂದು ಐಡಿಯ ಬಂತು. ಅವರ ಮಿತ್ರ ತಮ್ಮಣ್ಣ ಬುದ್ಧಿವಂತ - ಯೋಚನಾಶಕ್ತಿ ಇರೋನು. ''ಅವನೇ ಸರಿ'' - ಎಂದು ಅವನ ಹತ್ತಿರ ಬಂದು ತಮ್ಮ ಸಮಸ್ಯೆಯನ್ನು ಹೇಳಿಕೊಂಡ್ರು. ಅವನೂ ಎಲ್ಲಾ ಕೂಲಾಗಿ - ಕಾಮಾಗಿ ಕೇಳಿದ - ಕ್ಷಣಕಾಲ ಧ್ಯಾನಾಸಕ್ತನಾಗಿ ಯೋಚಿಸಿದ.

''ಮೊದಲ್ನೇ ನಾಲ್ಕು ಮಕ್ಳು - ಸೌಂದರ್ಯ - ಐಶ್ವರ್ಯ - ಗಾಂಭೀರ್ಯ - ಮಾಧುರ್ಯ ಅಲ್ವಾ?''

''ಹೌದು''

''ನಾಲ್ಕು ವರ್ಷ ಆದ್ಮೇಲೆ ಯಿನ್ನೊಂದು ಯೆಣ್ಣಾಗೈತೆ. ಅದ್ಕೂ ಅಂತಾದೇ ಯೆಸ್ರು ಬೇಕು - ಅದೇ ನಿಂ ಪ್ರಾಬ್ಲಮ್ಮು ಅಲ್ವಾ?''

''ಹೌದಪ್ಪ''

''ಅದಕ್ಯಾಕ್ಸಾ ಅಷ್ಟು ಯೋಚ್ನೆ? ಆಶ್ಚರ್ಯ ಅಂತ ಯಿಟ್ಬುಡಿ''

ಮಗುವಿನ ತಂದೆಗೆ ಬಹಳ ಸಂತೋಷವಾಯ್ತು.

''ಬಹಳ ಉಪಕಾರವಾಯ್ತು ತಮ್ಮಣ್ಣ - ಬಹಳ ಥ್ಯಾಂಕ್ಸ್''

''ವೋ! ಪರವಾಗಿಲ್ಲ ಬುಡಿ - ಅದಾವ್ದೊಡ್ಡುಪ್ಕಾರ. ಅಂದ್ರೇ-ಯಿಗ್ಲೇ ಯಿನ್ನೊಂದಿಸ್ಯ ಯೇಳ್ತಿರ್ತೀನಿ.''

''ಅದೇನಪ್ಪಾ?''

''ಮತ್ತೆ - ಯಿನ್ನೊಂದ್ ಸೊಲ್ಪ ಕಾಲ ಆದ್ಮೇಲೆ ಯಿನ್ನೊಂದೋ ಯೆಲ್ಡೋ ಆಗ್ಬೋದು. ಅಕಸ್ಮಾತು ಅಂಗೇನಾರಾ ಆದ್ರೆ - ಸುಮ್ಕೆ ತಲೆ ಕೆಡಿಸ್ಕೋ ಬೇಡಿ - ಧೈರ್ಯ - ಸ್ಥೈರ್ಯ ಅಂತ ಯಿಟ್ಬುಡಿ.''

''ಆಗ್ಲಿ ತಮ್ಮಣ್ಣ - ಬಹಳ ಥ್ಯಾಂಕ್ಸ್ - ಬರ್ತೀನಿ''

''ವೊಳ್ಳೇದ್ಸಾ - ವೋಗ್ಬುಟ್ಬನ್ನಿ''

ಆಷ್ಟೇ - ಧೈರ್ಯ - ಸ್ಥೈರ್ಯಗಳಿಂದ ಹೊರಟ್ರು - ಮಗುವಿನ ತಂದೆ - ಮನೆಯ ಕಡೆಗೆ.

★★★

ಮಾತು ಬೆಳ್ಳಿ
ಮೌನ ಬಂಗಾರ
ನನ್ನ ಹೆಂಡತಿ
ಬಂಗಾರ ಬಂಗಾರ – ಎಂದು
ಬಾಯಿ ಬಡೆದುಕೊಂಡರೆ
ನಾನು ಮೌನ

– ಶರಣು ಎರೇಕೊಪ್ಪ

Reg. No. CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR